ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 45 ನವೆಂಬರ್ 14, 1982 ಬೆಲೆ 60 ಪೈಸೆ

ವಿರೋಧ ಪಕ್ಷಗಳ ಮುಖಂಡರ ಸರದಿ ನಿರಶನ ಆರಂಭ


ಏಳು ಬೇಡಿಕೆಗಳನ್ನು ಮುಂದಿಟ್ಟು (ವಿವರ: ನವೆಂಬರ್ 7ರ ಐಕ್ಯರಂಗ) ವಿರೋಧ ಪಕ್ಷಗಳ ಮುಖಂಡರ ಸರದಿ ನಿರಶನ ನ. 12 ರಂದು ವಿಧಾನ ಸೌಧದೆದುರು ಆರಂಭವಾಯಿತು. ವಿರೋಧ ಪಕ್ಷಗಳ ಮುಖಂಡರು ಈ ಬೇಡಿಕೆಗಳ ಕುರಿತು ಜಂಟಿಯಾಗಿ ಬರೆದ ಪತ್ರಕ್ಕೆ ಮುಖ್ಯ ಮಂತ್ರಿ ಗುಂಡೂ ರಾವ್ ಅವರು ದರ್ಪದಿಂದ ಕೂಡಿದ ಬೇಜವಾಬ್ದಾರಿ ಉತ್ತರ ನೀಡಿದ್ದಾರೆಂದು ವಿರೋಧ ಪಕ್ಷಗಳ ಮುಖಂಡರು ಅಪಾದಿಸಿದ್ದಾರೆ.

ಆರಂಭವಾದ ಮೊದಲ ದಿನದ ಸರದಿ ನಿರಶನದಲ್ಲಿ ಶ್ರೀ ರಾಮಕೃಷ್ಣ ಹೆಗಡೆ, ಲಕ್ಷ್ಮೀಸಾಗರ್, ಕೃಷ್ಣ ಅಯ್ಯರ್, ಎ. ಕೆ. ಸುಬ್ಬಯ್ಯ, ಕಾಂ| ಸೂರ್ಯ ನಾರಾಯಣರಾವ್, ಪಿ. ಕೆ. ಸುಬ್ರಮಣಿ, ಅಬ್ದುಲ್ ನಜೀರ್ ಸಾಬ್, ಪೆರುಮಾಳ್, ರಘುಪತಿ, ಕಾಂ| ಪಂಪಾಪತಿ, ಬಿ. ವಿ. ಕಕ್ಕಿಲ್ಲಾಯ ಮೊದಲಾದ ಮುಖಂಡರು ಭಾಗವಹಿಸಿದ್ದರು.

ನವೆಂಬರ್ 21 [ಮೊದಲು ಪ್ರಕಟಿಸಿದ್ದಂತೆ ನ. 13 ರಂದು ಅಲ್ಲ] ರಂದು ಬೆಂಗಳೂರಿನ ಶೇಷಾದ್ರಿಪುರದ ನೆಹರೂ ಪಾರ್ಕಿನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿದೆ.

ಸರದಿ ನಿರಶನ ಆರಂಭವಾಗುವುದರ ಮೊದಲು ಕಾಂ| ಬ್ರೆಜ್ನೇವ್‌ರ ನಿಧನಕ್ಕೆ ಸಂತಾಪ ಸೂಚಕ ಸಭೆ ನಡೆಸಲಾಯಿತು.

ಭಾರತದ ಪರಮ ಮಿತ್ರ, ಶಾಂತಿ ಚಳುವಳಿಯ ಮುಂದಾಳು, ವಿಮೋಚನಾ ಹೋರಾಟಗಳ ಬೆಂಬಲಿಗ ಕಾಂ| ಲಿಯೊನಿಡ್ ಬ್ರೆಜ್ನೇವ್‌ರ ನಿಧನ



ಭಾರತದ ಸನ್ಮಿತ್ರ, ವಿಶ್ವಶಾಂತಿಯ ಚಳುವಳಿಯ ಮುಂದಾಳು, ವಿಮೋಚನಾ ಹೋರಾಟಗಳ ಬೆಂಬಲಿಗ, ರಷ್ಯದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ, ಸೋವಿಯಟ್ ರಷ್ಯದ ಸರ್ವೋಚ್ಚ ಮಂಡಳಿಯ ಅಧ್ಯಕ್ಷ ಕಾಂ| ಲಿಯೊನಿಡ್ ಬ್ರೆಜ್ನೇವ್‌ರು ನವೆಂಬರ್ 10 ರಂದು ನಿಧನರಾಗಿದ್ದಾರೆ.

"ಲೆನಿನ್ ಅವರ ವಾಸ್ತವ ಉತ್ತರಾಧಿಕಾರಿ ಬ್ರೆಜ್ನೇವ್‌ರ ಹೆಸರು ರಷ್ಯದ ಜನತೆ ಹಾಗೂ ಪ್ರಗತಿಪರ ಜನ ಕೋಟಿಯ ಹೃದಯದಲ್ಲಿ ಸದಾಕಾಲ ನೆಲೆಸಿರುತ್ತದೆ'' ಎಂದು ಕಮ್ಯೂನಿಸ್ಟ್ ಪಕ್ಷ ಹಾಗೂ ಸರಕಾರದ ಪರವಾಗಿ 'ತಾಸ್' ಪ್ರಕಟಿಸಿದೆ.

ಕೆಲವು ಸಮಯದಿಂದೀಚೆಗೆ ಅನಾರೋಗ್ಯಕ್ಕೆ ತುತ್ತಾಗಿದ್ದ ಕಾಂ| ಬ್ರೆಜ್ನೇವ್, ನಾಲ್ಕು ದಿನಗಳ ಹಿಂದೆ ಅಕ್ಟೋಬರ್ ಕ್ರಾಂತಿಯ 65ನೇ ವಾರ್ಷಿಕೋತ್ಸವದ ಸಾಂಪ್ರದಾಯಿಕ ಪಥಚಲನದ ಗೌರವರಕ್ಷೆಯನ್ನು ಕೆಂಪು ಚೌಕದಲ್ಲಿ ಸ್ವೀಕರಿಸಿದ್ದರು. ಇದು ಅವರ ಕೊನೆಯ ಸಾರ್ವಜನಿಕ ಕಾರ್ಯಕ್ರಮವಾಗಿತ್ತು. ಈ ಸಂದರ್ಭದಲ್ಲಿ ಅವರು, ಅಣು ಸಮರದ ಹಾದಿಯಲ್ಲಿ ಅಮೇರಿಕ ಮುಂದಡಿ ಇಡುತ್ತಿರುವುದರ ಕುರಿತು ಎಚ್ಚರಿಕೆ ನೀಡಿದ್ದರು.

ಕಾಂ| ಬ್ರೆಜ್ನೇವ್‌ರ ನಿಧನಕ್ಕೆ ಸಿ.ಪಿ.ಐ. (ಎಂ) ರಾಜ್ಯ ಸಮಿತಿ ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಹದಿನೆಂಟು ವರ್ಷಗಳ ಕಾಲ ರಷ್ಯದ ಅಗ್ರನಾಯಕರಾಗಿದ್ದ ಕಾಂ| ಬ್ರೆಜ್ನೇವ್ ವಿಶ್ವ ಶಾಂತಿಯ ರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದರು.

1904 ಡಿಸೆಂಬರ್ 19 ರಂದು ಉಕ್ರೇನ್‌ನ ಉಕ್ಕಿನ ಪಟ್ಟಣವೊಂದರ ಕಾರ್ಮಿಕ ಕುಟುಂಬದಲ್ಲಿ ಜನಿಸಿದ ಕಾಂ| ಬ್ರೆಜ್ನೇವ್, ಲೋಹಶಾಸ್ತ್ರ ಸಂಸ್ಥೆಯೊಂದರಲ್ಲಿ ಇಂಜನೀಯರ್ ಪದವೀಧರರಾದ ಬಳಿಕ ತಂದೆಯ ಜೊತೆ ಸ್ಥಳೀಯ ಉಕ್ಕಿನ ಕಾರ್ಖಾನೆಯಲ್ಲಿ ಉದ್ಯೋಗ ಪ್ರಾರಂಭಿಸಿದ್ದರು.

ಮಹಾನ್ ಅಕ್ಟೋಬರ್ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಸರಕಾರದ ಆರಂಭದ ದಿನಗಳಲ್ಲೇ ಬ್ರೆಜ್ನೇವ್‌ರ ಕಾರ್ಮಿಕ ಜೀವನವೂ ಆರಂಭವಾಯಿತು. ತಮ್ಮ 17ನೇ ವಯಸ್ಸಿನಲ್ಲಿ ಯುವ ಕಮ್ಯೂನಿಸ್ಟ್ ಲೀಗ್‌ಗೆ ಸೇರ್ಪಡೆಯಾಗಿ 1931ರಲ್ಲಿ ಪಕ್ಷದ ಸದಸ್ಯರಾದರು.

ಕರ್ಸ್ಕ್‌ನ ಭೂ ಆಡಳಿತ ಹಾಗೂ ಸುಧಾರಣೆ ಸಂಸ್ಥೆಯ ವಿಶೇಷ ಪ್ರೌಢ ಶಿಕ್ಷಣದ ನಂತರ 1927ರಲ್ಲಿ ಬ್ರೆಜ್ನೇವ್ ಸರ್ವೇಯರ್ ಆಗಿ ಕೆಲಸ ಮಾಡಿದರು. 1938ರಲ್ಲಿ ಪಕ್ಷದ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು.

1941ರಲ್ಲಿ ಹಿಟ್ಲರ್‌ನ ಪಡೆ ಆಕ್ರಮಣ ಮಾಡಿದಾಗ ಯುದ್ಧರಂಗಕ್ಕೆ ಪದಾರ್ಪಣೆಮಾಡಿದ ಕಾಂ|ಬ್ರೆಜ್ನೇವ್, ಮೇಜರ್ ಜನರಲ್ ಸ್ಥಾನ ಹಾಗೂ ಸೈನಿಕ ಮಂಡಳಿಯ ಸದಸ್ಯತ್ವವನ್ನು ಪಡೆದರು. ನಾಲ್ಕನೇ ಉಕ್ರೇನಿಯನ್ ರಂಗದ ರಾಜಕೀಯ ವಿಭಾಗದ ಮುಖ್ಯಸ್ಥರಾಗಿ ಪೋಲೆಂಡ್, ಜೆಕೊಸ್ಲೊವಾಕಿಯ ಹಾಗೂ ಹಂಗೇರಿ ವಿಮೋಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

1952ರಲ್ಲಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದ ಕಾಂ| ಬ್ರೆಜ್ನೇವ್ ಹಂತಹಂತವಾಗಿ ಮೇಲೇರುತ್ತ 1964 ರಲ್ಲಿ ಪಕ್ಷದ ಪ್ರಧಾನ

(8ನೇ ಪುಟ ನೋಡಿ)

ಮತ್ತೊಂದು ಅಪಾಯಕಾರಿ ಘೋಷಣೆ "ಗೋವಾ ಗೋವನ್ನರಿಗೆ ಮಾತ್ರ"

'ಗೋವಾ ಸಮಾಜ' ಎಂಬ ಭಾಷಾ ಅಂಧಾಭಿಮಾನಿಗಳ ನೇತೃತ್ವದಲ್ಲಿ ಗೋವಾದ ಅನೇಕ ಕಡೆ ಗೋವನ್ನರಲ್ಲದವರ ಮೇಲೆ ಅಮಾನುಷ ದಾಳಿ ನಡೆದು ಸಹಸ್ರಾರು ಜನ ವಲಸೆ ಬರುತ್ತಿದ್ದಾರೆ. ಈ ಗೋವೇತರರಲ್ಲಿ ಹೆಚ್ಚಿನಂಶ ಕನ್ನಡಿಗರು. ಅದರಲ್ಲೂ ಹೆಚ್ಚಿನವರು ಬರಗಾಲ ಪೀಡಿತ ಬಿಜಾಪುರ, ಗುಲ್ಬರ್ಗ ಜಿಲ್ಲೆಗಳಿಗೆ ಸೇರಿದವರು.

ಹುಬ್ಬಳ್ಳಿ ಮತ್ತು ಬೆಳಗಾಂನ ಸ್ಟೇಷನ್‌ಗಳಿಗೆ ತಂಡೋಪತಂಡವಾಗಿ ಹೆಂಗಸರು-ಮಕ್ಕಳೊಂದಿಗೆ ಚಿಂದಿಬಟ್ಟೆ-ಬರೆ, ಒಡಕು ಪಾತ್ರೆಗಳ ಗಂಟನ್ನು ಕಟ್ಟಿಕೊಂಡು ಬಂದಿಳಿಯುತ್ತಿರುವ ಸಹಸ್ರಾರು ಕನ್ನಡ ಕಾರ್ಮಿಕರ ಪರಿಸ್ಥಿತಿ ಕರುಣಾಜನಕವಾಗಿತ್ತು. ಎಲ್ಲರ ಮುಖದಲ್ಲೂ ದಿಗಿಲು, ಕಳವಳ ಕಂಡು ಬರುತ್ತಿತ್ತು.

ವಾಸ್ಕೋ, ಮರ್ಮಗಾಂವ್ ಮತ್ತಿತರ ಕಡೆ ಈ ಕನ್ನಡಿಗ ಮತ್ತು ಇತರ ಭಾಷಾ ಅಲ್ಪ ಸಂಖ್ಯಾತ ಕಾರ್ಮಿಕರ ಗುಡಿಸಲುಗಳನ್ನು ಸುಟ್ಟುಬೂದಿಮಾಡಲಾಗಿದೆ. ಹೆಂಗಳೆಯರನ್ನು ಮಾನ ಭಂಗಕ್ಕೆ ಗುರಿಪಡಿಸಲಾಗಿದೆ. ಹೊಡೆದು-ಬಡಿಯಲಾಗಿದೆ.

ಗೋವದಲ್ಲಿ ಕನ್ನಡಿಗ ಮತ್ತಿತರ ಗೋವೇತರ ಜನರ ಮೇಲೆ ನಡೆದ ಭೀಕರ, ಅಮಾನುಷ ಅತ್ಯಾಚಾರವನ್ನು ಸಿ.ಪಿ.ಐ. (ಎಂ) ಉಗ್ರವಾಗಿ ಖಂಡಿಸುತ್ತದೆ. 'ಮಣ್ಣಿನ ಮಕ್ಕಳವಾದ'ವನ್ನು ಸಿ ಪಿ. ಐ. (ಎಂ) ಮೊದಲಿನಿಂದಲೂ ವಿರೋಧಿಸುತ್ತಲೇ ಬಂದಿದೆ.

ವಾಸ್ಕೋ, ಪಣಜಿ, ಮರ್ಮಗಾಂವ್ ಮೊದಲಾದೆಡೆ "ಗೋವಾ ಬಿಟ್ಟು ತೊಲಗಿ," "ಗೋವಾ ಗೋವನ್ನರಿಗೆ ಮಾತ್ರ'' ಎಂಬ ಗೋಡೆ ಬರಹಗಳು ಕಂಡು ಬರುತ್ತಿವೆ. ಈ ಅಪಾಯಕಾರಿ ಬೆಳವಣಿಗೆ ಕಂಡೂ ಕಣ್ಮುಚ್ಚಿಕುಳಿತಿದ್ದ ಗೋವಾ ಸರಕಾರದ ಕ್ರಮ ಖಂಡನೀಯ. ಎಲ್ಲೆಲ್ಲೂ ಗೋವೇತರರ ಮೇಲೆ ಹಲ್ಲೆ ನಡೆಯುತ್ತಿದ್ದಾಗ ಗೋವಾ ಪೋಲಿಸರು ವರ್ತಿಸಿದ ಬಗೆ ಮಾನವತೆಗೇ ಸವಾಲು.

ಸಂಘಟನೆ, ಅಧಿಕಾರ, ಶಕ್ತಿಗಳಿಲ್ಲದೇ ದುರ್ಬಲರಾಗಿರುವ ಶೋಷಿತ ಕೂಲಿಗಾರರ ಮೇಲೆ ಹಲ್ಲೆ ನಡೆಸಿರುವ ಈ ಅಂಧಾಭಿಮಾನಿಗಳು ಭಾರತದ ಐಕ್ಯತೆಗೇ ಮಾರಕವಾಗಿದ್ದಾರೆ. ಈ ಘಟನೆ ಜನತೆಯ ಸಂವಿಧಾನ ಬದ್ಧ ಹಕ್ಕನ್ನು

(8ನೇ ಪುಟ ನೋಡಿ)

ನನ್ನ ಭೂಗತ ಜೀವನದ ದಿನಗಳು

—ಇ. ಕೆ. ನಾಯನಾರ್

ಸೂರ್ಯರಶ್ಮಿಗಳು ಕಾಡಿನಿಂದ ಬಹು ಬೇಗ ಮರೆಯಾದವು. ದಟ್ಟವಾದ ಮರಗಳ ನಡುವೆ ಕತ್ತಲೆ ಆವರಿಸಿತು. ನರಿಗಳು ಕೂಗಲಾರಂಭಿಸಿದವು. ಭಯಂಕರ ಕರಡಿಯೊಂದು ನಾವಿದ್ದ ಕಡೆ ಹಾದು ಹೋಯಿತು.

"ನಾವು ಬೆಂಕಿ ಹೊತ್ತಿಸಿದರೆ ಈ ಕರಡಿಗಳ ಕಾಟದಿಂದ ತಪ್ಪಿಸಿಕೊಳ್ಳಬಹುದು" ಎಂದು ಸಂಗಾತಿಯೊಬ್ಬರು ಸಲಹೆ ನೀಡಿದರು. "ಆದರೆ ಬೆಂಕಿಯ ಬೆಳಕಿನಿಂದ ನಾವಿಲ್ಲಿ ಅಡಗಿಕೊಂಡಿರುವ ಸುಳಿವು ದೊರಕಿ ನಾವೆಲ್ಲಾ ಸಿಕ್ಕಿಬೀಳಬಹುದು".

ಎಲ್ಲರೂ ನಿಶ್ಶಬ್ಧರಾಗಿದ್ದೆವು. ರಾತ್ರಿಯು ವಿಪರೀತ ಚಳಿಯಿಂದ ಕೂಡಿತ್ತು. ದಣಿವು ಮತ್ತು ಹಸಿವುಗಳಿಂದ ನಮ್ಮ ಕಣ್ಣು ರೆಪ್ಪೆಗಳು ಮುಚ್ಚಿಕೊಂಡವು. ಕಾಡು ಪ್ರಾಣಿಗಳ ಓಡಾಟಕ್ಕೆ ಒಣ ಎಲೆಗಳು, ರೆಂಬೆಗಳು ಮುರಿದ ಶಬ್ದ ಕೇಳಿ ಬರುತ್ತಿತ್ತು. ಆ ಸಪ್ಪಳದ ಧ್ವನಿಯನ್ನು ಆಲಿಸಿ ಅದು ಯಾವ ಪ್ರಾಣಿಯಿರಬಹುದು, ಯಾವ ಪ್ರಾಣಿ ನಮ್ಮ ಕಡೆ ಧಾವಿಸಬಹುದು ಎಂದು ನಾನು ಯೋಚಿಸುತ್ತಿದ್ದೆ. ನಾವು ಈ ಕಾಡು ಪ್ರಾಣಿಗಳಿಗೆ ಆಹಾರವಾಗಬೇಕೆ? ಪೋಲೀಸರಿಗಿಂತ ಯಾವುದೇ ಕ್ರೂರ ಪ್ರಾಣಿಯಾದರೂ ಉತ್ತಮವೇ.

ಮತ್ತೊಂದು ರಾತ್ರಿಯು ಉರುಳಿತು ನನ್ನ ಸುತ್ತಲಿದ್ದ ಸಂಗಾತಿಗಳ ಮುಖದ ಮೇಲೆ ದಣಿವು, ನೋವುಗಳ ಛಾಯೆ ಕಾಣಿಸಿತು. ನಾನೂ ಸಹ ಚಿಂತಾಭರಿತನಾಗಿದ್ದೆ. ಆದರೆ ನನ್ನ ಸಂಗಾತಿಗಳ ನೈತಿಕ ಸ್ಥೈರ್ಯವನ್ನು ಹೆಚ್ಚಿಸಲು "ಕಾಮ್ರೇಡ್ಸ್, ಸ್ವಾತಂತ್ರ್ಯದ ಹಾದಿಯು ಗುಲಾಬಿ ಹೂಗಳನ್ನು ಚೆಲ್ಲಿದ ದಾರಿಯಲ್ಲ. ಇದು ಬಹಳ ಕಠಿಣ ಮತ್ತು ದುಸ್ತರವಾದ ದಾರಿ" ಎಂದು ಹೇಳಿ ನಾನು ಉತ್ತೇಜಿಸಿದೆ "ಹೌದು, ಅದು ಸತ್ಯ" ಎಂದು ಒಬ್ಬ ಸಂಗಾತಿ ಒಪ್ಪಿ ದನಿಗೂಡಿಸಿದರು.

ಪ್ರತಿ ನಿತ್ಯವೂ ದನಗಳನ್ನು ಮೇಯಿಸಲು ಮತ್ತು ಕಟ್ಟಿಗೆ ಹುಡುಕಿಕೊಂಡು ನಾವಿದ್ದ ಕಾಡಿಗೆ ಜನರು ಬರುತ್ತಿದ್ದರು. ಮಾರನೆಯ ದಿನ ಮಧ್ಯಾಹ್ನದವರೆಗೂ ನನಗೆ ಏನೇನೂ ಆಹಾರ ದೊರಕಲಿಲ್ಲ. ನಾವು ಇನ್ನೂ ಅನುಕೂಲಕರ ಸ್ಥಳವನ್ನು ಹುಡುಕಿ ಅಲ್ಲಿ ಕಾಯುತ್ತಾ ಕುಳಿತೆವು. ಸಣ್ಣ ಸಿಳ್ಳೆಯ ಧ್ವನಿಯೊಂದು ಕೇಳಿ ಬಂತು. ನಾವೂ ನಮ್ಮ ಸಿಗ್ನಲ್ ಕೊಟ್ಟೆವು. ಆತನು ಮಧ್ಯಾಹ್ನ 3 ಗಂಟೆಯ ಸಮಯಕ್ಕೆ ನಮ್ಮನ್ನು ತಲುಪಿದನು. ಅವನು ನಮ್ಮ ಹಳ್ಳಿಯಿಂದ ನಮಗಾಗಿ ಆಹಾರವನ್ನು ತಂದಿದ್ದನು. "ಪೋಲೀಸರು ಕಾಡನ್ನೆಲ್ಲಾ ಹುಡುಕುವ ಯೋಜನೆ ಹಾಕಿದ್ದಾರೆ. ನೀವು ಕಾಡಿನ ಮಧ್ಯ ಭಾಗಕ್ಕೆ ಹೋಗಬೇಕು" ಎಂಬ ಸುದ್ದಿಯನ್ನೂ ತಂದಿದ್ದನು.

ಊಟವಾದ ಬಳಿಕ ನಾವು ಕಾಡಿನ ಮಧ್ಯ ಭಾಗದೆಡೆಗೆ ನಡೆದೆವು. ಆದರೆ ಇದು ಅಷ್ಟು ಸುಲಭವಾಗಿರಲಿಲ್ಲ. ಆದರೂ ಪೊದೆಗಳನ್ನು ಸರಿಸಿಕೊಂಡು ಕಷ್ಟಪಟ್ಟು ದಾರಿ ಮಾಡಿಕೊಂಡು ಮುಂದುವರಿದೆವು. ಸ್ವಲ್ಪ ದೂರ ಕ್ರಮಿಸಿದ ನಂತರ ಚಿಲುಮೆಯೊಂದನ್ನು ಕಂಡೆವು. ನಾವು ತಂಪಾದ ತಿಳಿ ನೀರನ್ನು ಕುಡಿದು ಅಲ್ಲಿಯೇ ಇದ್ದ ಬಂಡೆಯ ಮೇಲೆ ವಿಶ್ರಮಿಸಿದೆವು. ರಾತ್ರಿಯಲ್ಲಿ ಬಹಳ ಶೀತವಿದ್ದುದರಿಂದ ನಮ್ಮಲ್ಲಿ ಕೆಲವರಿಗೆ ನಿದ್ರೆ ಮಾಡಲಾಗಲಿಲ್ಲ.

"ಕಾಮ್ರೇಡ್, ಇನ್ನು ಹೆಚ್ಚು ನಮ್ಮಿಂದ ಸಹಿಸಲು ಸಾಧ್ಯವಾಗುವುದಿಲ್ಲ" ಎಂದು ನಮ್ಮಲ್ಲಿ ಬಹಳ ಸಂಗಾತಿಗಳು ಮಾರನೆಯ ದಿನ ಹೇಳಿದರು. ನಾನು ಅವರನ್ನು ಸಂತೈಸಲು ಪ್ರಯತ್ನಿಸಿದೆ. ಆದರೂ ಅವರು ಚಿಂತಾಕ್ರಾಂತರಾಗಿಯೇ ಇದ್ದರು. ಮಧ್ಯಾಹ್ನವೂ ನಮಗೆ ಏನೂ ಆಹಾರ ದೊರಕಲಿಲ್ಲ. ನಮ್ಮಲ್ಲಿ ಆರು ಮಂದಿ ಆಹಾರವನ್ನು ಹುಡುಕಿಕೊಂಡು ಹೊರಟರು. ಅವರೆಲ್ಲಾ ದಣಿವಿನಿಂದ ನಿರಾಶರಾಗಿ ಹೋಗಿ ಬಿಟ್ಟರೆಂದು ನನಗೆ ಗೊತ್ತಿರಲಿಲ್ಲ. ರಾತ್ರಿಯಾದರೂ ಅವರು ಹಿಂತಿರುಗಲಿಲ್ಲ. ಕಾಡಿನಿಂದ ಹೊರಗಿದ್ದ ನಮ್ಮ ಸಂಗಾತಿಗಳೊಡನೆಯೂ ಸಂಪರ್ಕ ಬೆಳೆಸಲಾಗಲಿಲ್ಲ. ಹಸಿವು ಚಿಂತೆಯನ್ನು ಮತ್ತಷ್ಟು ಹೆಚ್ಚಿಸಿತ್ತು. ಅಲ್ಪ ಸ್ವಲ್ಪ ಸಮಾಧಾನ ನೀಡುತ್ತಿದ್ದ ಬೀಡಿಗಳೂ ಮುಗಿಯುತ್ತಾ ಬಂದಿದ್ದವು.

ಇನ್ನು ರಾತ್ರಿ ಉಳಿದಿದ್ದ ನಾವು ಆ ಸಂಗಾತಿಗಳು ವಾಪಸ್ ಹೋಗಿರಬಹುದೆಂದು ಭಾವಿಸಿದೆವು. ಬಹಳ ದಣಿದಿದ್ದರಿಂದ ಅವರು ಹೊರಟು ಹೋಗಿದ್ದರು. ಅವರು ನಮ್ಮನ್ನು ವಂಚಿಸಿ ಹೋಗುವುದಿಲ್ಲವೆಂದು ನಮಗೆ ನಂಬಿಕೆಯಿತ್ತು. ಮಾರನೆಯ ಬೆಳಗ್ಗೆ ನಾವು ಮುಂದೆ ನಡೆದವು. ನಾವು ಬಹಳ ಹಸಿದಿದ್ದು ದಣಿದಿದ್ದೆವು ನಮ್ಮಲೊಬ್ಬರು ಮರವೊಂದರ ಮೇಲೆ ಜೇನುಗೂಡಿರುವುದನ್ನು ಗುರುತಿಸಿದರು. ಮುಳ್ಳುಗಳಿದ್ದರೂ ಸಹ ಅವರು ಜೇನುಗೂಡನ್ನು ಬಿಡಿಸಿ ತಂದರು. ಇದರಿಂದ ನಮಗೆ ಸ್ವಲ್ಪ ಶಕ್ತಿ ನೀಡಿ ಜೀವ ಚೇತರಿಸಿಕೊಂಡಿತು.

ಮಧ್ಯಾಹ್ನದ ವೇಳೆಗೆ ನಮಗೆ ಸಿಗ್ನಲ್ ಬಂದಿತು. ನಾವು ಉತ್ತರಿಸಿದೆವು. ಹುಡುಗನೊಬ್ಬನು ನಮಗೆಲ್ಲಾ ಊಟದ ಬುತ್ತಿ, ಬೀಡಿ ಕಟ್ಟು, ಮುಂತಾದವುಗಳನ್ನು ತಂದುಕೊಟ್ಟನು. ಅದರೊಂದಿಗೆ "ಬೆಟ್ಟವನ್ನು ಹತ್ತಿ ಇನ್ನೊಂದು ಭಾಗಕ್ಕೆ ಹೋಗಿ" ಎಂಬ ಸುದ್ದಿಯಿದ್ದ ಚೀಟಿಯನ್ನೂ ಸಹ ಕೊಟ್ಟನು.

ಪೋಲೀಸರು ನಮ್ಮನ್ನು ಹಿಂಬಾಲಿಸುತ್ತಿದ್ದರೆಂದು ಕಾಣುತ್ತದೆ. ನಮಗೆ ಸುದ್ದಿ ತಂದಿದ್ದ ಹುಡುಗನು ಆತುರಾತುರವಾಗಿ ಹೊರಟು ಹೋದನು. ಅವನು ದನಗಳನ್ನು ಅಟ್ಟಿಕೊಂಡು ಹೋಗುತ್ತಿದ್ದನ್ನು ನೋಡಿದೆವು. ನಾವು ಬೆಟ್ಟವನ್ನು ಹತ್ತಲಾರಂಭಿಸಿದೆವು. ಸಂಜೆಯ ವೇಳೆಗೆ ತುದಿಯನ್ನು ತುಲುಪಿದೆವು. ಸ್ವಲ್ಪ ದೂರದಲ್ಲಿ ಗುಂಡು ಹಾರಿಸಿದ ಸದ್ದು ಕೇಳಿ ಬಂತು. ಪೋಲೀಸರು!

ಮರುದಿನ ಬೆಳಗ್ಗೆ ಬೇಗನೆ ಬೆಟ್ಟವನ್ನು ಇಳಿಯಲಾರಂಭಿಸಿದೆವು. ಪೊದೆಗಳಿಂದ ಆವೃತ್ತವಾಗಿದ್ದ ಬಂಡೆ ಕಲ್ಲಿನ ಮೇಲೆ ಕುಳಿತು ವಿಶ್ರಮಿಸಿಕೊಂಡೆವು. ಅಡಗಿಕೊಳ್ಳಲು ಅದು ಅತಿ ಸೂಕ್ತ ಸ್ಥಳವಾಗಿತ್ತು. ಆ ದಿನ ನಮಗೆ ಎರಡು ದಿನಗಳಿಗಾಗುವಷ್ಟು ಆಹಾರ ಸಿಕ್ಕಿತು.

ನಾವು ಆರು ಮಂದಿ ಅಲ್ಲಿಯೇ ಮೂರು ದಿನಗಳನ್ನು ಕಳೆದೆವು. ಮರುದಿನ ತಕ್ಷಣ ಆ ಸ್ಥಳವನ್ನು ಬಿಡಬೇಕೆಂದು ನಮಗೆ ಸೂಚನೆ ಬಂದಿತು. ನಾವು ಬೆಟ್ಟವನ್ನು ಇಳಿಯಲಾರಂಭಿಸಿದೆವು. ಕಾಡನ್ನು ದಾಟಿ ಆ ಭಾಗದಲ್ಲಿದ್ದ ಹಳ್ಳಿಗೇಕೆ ಹೋಗಬಾರದೆಂಬ ಉಪಾಯ ನಮಗೆ ಇದ್ದಕ್ಕಿದ್ದಂತೆ ಹೊಳೆಯಿತು.

ನಾವು ನಿಧಾನವಾಗಿ ನಡೆಯುತ್ತಾ ಹೋದೆವು. ನಾವು ಬಹಳ ದಣಿದಿದ್ದರೂ ಮುಂದೆ ಹೋದೆವು. ಮಾರನೆಯ ದಿನ ನಮಗೆ ಆಹಾರ ಸಿಗಲಿಲ್ಲ. ಝರಿಯ ತಂಪಾದ ನೀರನ್ನು ಕುಡಿದೆವು. ಅದೇ ನಮಗೆ ಆ ದಿನದ ಆಹಾರ. ನಮ್ಮ ಕಾಲುಗಳಲ್ಲಿ ಜಿಗಣೆಗಳು ನೇತಾಡುತ್ತಿದ್ದವು. ನಮ್ಮಲ್ಲಿ ಕೆಲವರಿಗೆ ಕಾಲುಗಳು ಊದಿಕೊಂಡಿದ್ದು ಕುಂಟುತ್ತಿದ್ದರು.

ಬಿದಿರಿನ ಮೆಳೆಯ ಮಧ್ಯದಲ್ಲಿ ಬಿದ್ದಿದ್ದ ಮರವೊಂದರ ಮೇಲೆ ಕುಳಿತೆವು. ಆಗ ದನಗಾಹಿಗಳಿಂದ ಸಂಜ್ಞೆಯ ಕೂಗು ಕೇಳಿಸಿತು. ಪೋಲೀಸರು ಆ ದಾರಿಯಲ್ಲಿ ಬರುತ್ತಿದ್ದರು. ನಾವು ಮತ್ತೊಂದು ದಿಕ್ಕಿಗೆ ಓಡಬೇಕಿತ್ತು. ನಾನು ಎದ್ದು ನಿಂತು ಹೇಳಿದೆ "ಕಾಮ್ರೇಡ್ಸ್, ತ್ವರೆ ಮಾಡಿ. ನಾವು ಬೇಗ ಬೆಟ್ಟವನ್ನು ಹತ್ತಿ ಆ ಭಾಗಕ್ಕೆ ಹೋಗೋಣ." ದನಗಾಹಿಗಳ ಕೂಗಿನ ಧ್ವನಿಯಲ್ಲಿ ಸ್ವಲ್ಪ ಬದಲಾವಣೆಯಾಯಿತು. ಪೋಲೀಸರು ಬಹು ವೇಗವಾಗಿ ನಮ್ಮೆಡೆಗೆ ಬರುತ್ತಿರುವರೆಂಬುದು ಅದರ ಸಂಕೇತವಾಗಿತ್ತು.

"ನಾವಿನ್ನು ತಡಮಾಡುವುದು ಸರಿಯಲ್ಲ. ಆದಷ್ಟು ಶೀಘ್ರವಾಗಿ ಮುಂದುವರಿಯಬೇಕು."

"ಕಾಮ್ರೇಡ್ಸ್!, ನೀವು ಓಡಿ ಪೋಲೀಸರಿಂದ ತಪ್ಪಿಸಿಕೊಳ್ಳಿ. ನನಗೆ ನಡೆಯಲು ಸಾಧ್ಯವಿಲ್ಲ."

"ಇಲ್ಲ. ನಾವು ನಿನ್ನನ್ನು ಇಲ್ಲಿ ಬಿಟ್ಟು ಹೋಗಲು ಸಾಧ್ಯವಿಲ್ಲ. ಪೋಲೀಸರ ಬಲೆಗೆ ನಿನ್ನನ್ನು ಸಿಕ್ಕಿಸಿ ಹೋಗಲಾರೆವು"

ಆಗ ಮತ್ತೊಬ್ಬ ಸಂಗಾತಿ ನನಗೆ ಹೇಳಿದರು. "ಇಲ್ಲ, ನನಗೂ ಇನ್ನು ಒಂದು ಹೆಜ್ಜೆ ಸಹ ಮುಂದಿಡಲಾಗುವುದಿಲ್ಲ. ಈ ಕಾಡಿನಲ್ಲಿ ಇನ್ನು ನಮ್ಮ ಪಯಣ ಮುಂದುವರಿಸುವುದು ಸಾಧ್ಯವಿಲ್ಲ. ನಾನು ಪೋಲೀಸರಿಗೆ ಶರಣಾಗಿ ಬಿಡುತ್ತೇನೆ. ಕಾಮ್ರೇಡ್ಸ್, ನೀವು ಓಡಿ ಹೋಗಿ ಗೌರವ ಉಳಿಸಿಕೊಳ್ಳಿ. ನಮ್ಮ ಉದಾತ್ತ ಗುರಿಯನ್ನು ಸಾಧಿಸಲು ನನ್ನ ದೇಹ ಬಹಳ ದುರ್ಬಲವಾಗಿದೆ. ತಡಮಾಡಿದರೆ ನೀವೂ ಸಹ ಸಿಕ್ಕಿಬೀಳುತ್ತೀರಿ."

ನಾನು ಅವರನ್ನು ಪ್ರೋತ್ಸಾಹಿಸಿ ದಣಿದ ಮನಗಳಲ್ಲಿ ಉತ್ಸಾಹ ತುಂಬಲು ಪ್ರಯತ್ನಿಸಿದೆ. ಆದರೆ ಅವರು ಸಂಪೂರ್ಣವಾಗಿ ನಿರಾಶರಾಗಿಬಿಟ್ಟಿದ್ದರು. ಯಾವುದೇ ರೀತಿಯ ಪ್ರಯತ್ನವೂ ಅವರನ್ನು ಪ್ರಚೋದಿಸಲು ಸಾಧ್ಯವಿರಲಿಲ್ಲ. ನಮಗಿದ್ದ ಕಾಲಾವಕಾಶ ಬಹಳ ಕಡಿಮೆಯಾಗಿತ್ತು. ಇನ್ನು ಅವರೊಡನೆ ಚರ್ಚಿಸಿ ಪ್ರಯೋಜನವಿರಲಿಲ್ಲ. ಮೂವರು ಸಂಗಾತಿಗಳು ಏಳಲೇ ಇಲ್ಲ. ಅವರು ಸುಸ್ತಾಗಿ ಆ ಮರದ ದಿಮ್ಮಿಯ ಮೇಲೆಯೇ ಕುಳಿತುಬಿಟ್ಟರು. ಅವರಲ್ಲಿ ಒಬ್ಬರ ಬಳಿ ಒಂದು ಛತ್ರಿಯಿತ್ತು, ಅದನ್ನು ಅವರು ಮತ್ತೊಬ್ಬ ಸಂಗಾತಿಗೆ ಕೊಟ್ಟರು. ಅವನು ಅದನ್ನು ಊರುಗೋಲಾಗಿ ಉಪಯೋಗಿಸಿ ನಡೆಯಲಾರಂಭಿಸಿದರು. ದೂರದಿಂದ ದನಗಾಹಿಗಳ ಎಚ್ಚರಿಕೆಯ ಕೂಗು ಕೇಳಿ ಬಂತು.

"ಇನ್ನು ಹೆಚ್ಚು ತಡಮಾಡುವುದು ಸರಿಯಲ್ಲ," ಕೊಡೆಯನ್ನು ಊರುಗೋಲನ್ನಾಗಿ ಮಾಡಿಕೊಂಡಿದ್ದ ಸಂಗಾತಿ ಹೇಳಿದರು.

"ಬನ್ನಿ, ನಾವಿನ್ನು ಹೋಗೋಣ. ನಾವು ಅತ್ಯಮೂಲ್ಯ ಸಮಯಾವಕಾಶವನ್ನು ಹಾಳು ಮಾಡುತ್ತಿದ್ದೇವೆ." ಪೊದೆಗಳೊಳಗೆ ನುಸುಳಿಕೊಂಡು ಮುಂದೆ ನಡೆದೆವು. ಆ ಸಂಗಾತಿಗಳನ್ನು ಅಲ್ಲಿ ಬಿಟ್ಟು ಹೋಗಲು ನನ್ನ ಹೃದಯ ಭಾರವಾಯಿತು. ಈಗ ನಾವು ಮೂರು ಮಂದಿ ಮಾತ್ರವಿದ್ದೆವು. ಮುಂದೆ ಇದ್ದ ಸಂಗಾತಿಗೆ ನಡೆಯಲಾಗುತ್ತಿರಲಿಲ್ಲ. ಅವರು ಕೊಡೆಯ ಸಹಾಯದಿಂದ ನಡೆಯುತ್ತಿದ್ದರು. ಯಾವ ಕ್ಷಣದಲ್ಲಾದರೂ ಬೀಳಬಹುದಿತ್ತು. ಮುಳ್ಳಿನ ಪೊದೆಗಳೊಳಗೆ ದಾರಿ ಮಾಡಿಕೊಂಡು ಹೋಗುವುದು ಬಹಳ ಕಷ್ಟದ ಕೆಲಸವಾಗಿತ್ತು. ಇದರಿಂದ ಬಹಳ ಸಮಯ ವ್ಯರ್ಥವಾಯಿತು.

ಸ್ವಲ್ಪ ದೂರ ನಡೆದ ಮೇಲೆ ಆ ದಣಿದಿದ್ದ ಸಂಗಾತಿಯು "ಇಲ್ಲಿ ಪೊದೆಗಳ ಸಂದಿಯಲ್ಲಿ ಒಂದು ಕಲ್ಲಿದೆ. ಈ ಕಲ್ಲಿನ ಮೇಲೆ ಸ್ವಲ್ಪ ವಿಶ್ರಮಿಸಿಕೊಳ್ಳೋಣ" ಎಂದು ಹೇಳಿದರು. ನಾವೂ ಒಪ್ಪಿದೆವು. ಪೊದೆಗಳೊಳಗೆ ಕಷ್ಟಪಟ್ಟು ನುಸುಳಿ ಆ ಕಲ್ಲಿನ ಮೇಲೆ ತೆವಳಿ ಕುಳಿತುಕೊಂಡೆವು.

ತಕ್ಷಣ ನಾನು ಹೇಳಿದೆ. "ಕುಳಿತುಕೊಳ್ಳಬೇಡಿ. ಮಲಗಿಕೊಂಡಲ್ಲಿ ಯಾರಿಗೂ ಕಾಣಿಸುವುದಿಲ್ಲ" ನಾವೆಲ್ಲಾ ಕಲ್ಲಿನ ಮೇಲೆ ಮಲಗಿಕೊಂಡೆವು. ಸ್ವಲ್ಪ ದೂರದಲ್ಲಿ ಗುಂಡೊಂದು ಸಿಡಿಯಿತು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಂಶಯಗಳು ಸುಳಿಯಲಾರಂಭಿಸಿದವು. ಪೋಲೀಸರು ನಮ್ಮ ಸಂಗಾತಿಗಳನ್ನು ಪತ್ತೆ ಹಚ್ಚಿದರೇ? ಯಾರ ಮೇಲೆ ಅವರು ಗುಂಡು ಹಾರಿಸಿದ್ದು? ದಣಿದ ನಮ್ಮ ಮನಗಳಲ್ಲಿ ಸಂಶಯಗಳು ತುಂಬಿಕೊಂಡವು. ನಡೆದಿದ್ದೇನು ಎಂದು ತಿಳಿಯಲು ನಮಗೆ ಯಾವ ಮಾರ್ಗವೂ ಇರಲಿಲ್ಲ.

ಬಹಳ ಸಮಯದ ನಂತರ ಅದೇನೆಂದು ನನಗೆ ತಿಳಿಯಿತು. ಬಹುಶಃ ನಮ್ಮ ಸಂಗಾತಿಗಳು ಮೆಲ್ಲನೆ ಕಾಡಿನಿಂದ ಹೊರಕ್ಕೆ ಹೋಗುತ್ತಿದ್ದಾಗ ಅವರನ್ನು ಪೋಲೀಸರು ನೋಡಿ ಗುಂಡು ಹಾರಿಸಿರಬೇಕು. ತರುವಾಯ ಯಾರಿಗೂ ಗಾಯಗಳಾಗಿಲ್ಲವೆಂದು ನಮಗೆ ತಿಳಿಯಿತು. ಆದರೆ ಪೋಲೀಸರು ಅವರನ್ನು ಹಿಡಿದು ಚಿತ್ರಹಿಂಸೆ ಕೊಟ್ಟಿದ್ದರು. ಕಾಡಿನೊಳಕ್ಕೆ ನುಗ್ಗಿ ಬಂದ ಸಂಗಾತಿಗಳು ಬಂದೂಕು, ಮತ್ತಿತರೆ ಅಸ್ತ್ರಗಳಿಂದ ಶಸ್ತ್ರ ಸಜ್ಜಿತರಾಗಿದ್ದಾರೆಂದು ಪೋಲೀಸರು ಭಾವಿಸಿದ್ದರು. ಈ ಭಾವನೆಯೇ ಪೋಲೀಸರಿಗೆ ನಮ್ಮ ಬಗ್ಗೆ ಭೀತಿ ಹುಟ್ಟಿಸಿ ನಮಗೆ ತಪ್ಪಿಸಿಕೊಳ್ಳಲು ಸಹಾಯ ನೀಡಿತು.

ಅದೊಂದು ಭಯಂಕರ ರಾತ್ರಿಯಾಗಿತ್ತು. ಹಸಿವು, ನೋವಿನಿಂದ ದಣಿದಿದ್ದ ನಮಗೆ ನಾವು ಅಡಗಿಕೊಂಡಿದ್ದ ಮುಳ್ಳಿನ ಪೊದೆಯ ಜಾಗವನ್ನು ಬಿಟ್ಟು ಕದಲಲು ನಮಗೆ ತ್ರಾಣವಿರಲಿಲ್ಲ. ಬೆಳಗಿನಲ್ಲಿ ಮಾತ್ರವೇ ಹೊರಡಲು ಸಾಧ್ಯವಿತ್ತು. ನಾವು ಹಸಿವು, ದಣಿವುಗಳಿಂದ ಸುಸ್ತಾಗಿ ಆ ಕಲ್ಲಿನ ಮೇಲೆಯೇ ಬಿದ್ದುಕೊಂಡೆವು. ಒಣ ಎಲೆಗಳ ಸರಸರ ಸಪ್ಪಳ ನನಗೆ ಕೇಳಿ ಬಂತು. ಏನೋ ನಮ್ಮತ್ತ ಬರುತ್ತಿತ್ತು. ತಲೆ ಎತ್ತಿ ನಾನು ನೋಡಿದರೆ ಹಾವೊಂದು ನಮ್ಮ ಕಡೆ ಹರಿದು ಬರುತ್ತಿತ್ತು.

ತಕ್ಷಣ ಸಂಗಾತಿಯೊಬ್ಬರು "ಕಾಮ್ರೇಡ್, ನಿಮ್ಮ ತಲೆ ಎತ್ತಬೇಡಿ. ಹಾಗೇ ನಿಶ್ಚಲರಾಗಿ ಮಲಗಿ. ಹಾವು ನಮ್ಮ ಕಡೆ ಬಂದರೂ ನಮಗೇನೂ ತೊಂದರೆ ಮಾಡುವುದಿಲ್ಲ. ತನ್ನ ಪಾಡಿಗೆ ತಾನು ಹೋಗುತ್ತದೆ'' ಎಂದು ನನಗೆ ಹೇಳಿದರು. ನಾನು ತಲೆಯನ್ನು ತಗ್ಗಿಸಿ ನಿಶ್ಚಲವಾಗಿ ಮಲಗಿದೆ. ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡು ಏನನ್ನೂ ಎದುರಿಸಲು ನಾನು ಸಿದ್ಧನಾದೆ. ಹಾವು ತೆವಳಿಕೊಂಡು ನನ್ನ ಕಾಲ ಮೇಲೆ ಹತ್ತಿತು. ಆ ಕ್ಷಣದಲ್ಲಿ ನನಗಾದ ಅನುಭವವನ್ನು ವಿವರಿಸಲು ಬರುವುದಿಲ್ಲ. ನಾನು ನಿಶ್ಚಲನಾಗಿ ಮಲಗಿದ್ದೆ. ನನ್ನ ಹೃದಯವು ಜೋರಾಗಿ ಬಡಿದುಕೊಳ್ಳುತ್ತಿತ್ತು.

(7 ನೇ ಪುಟ ನೋಡಿ)

ಕೇಂದ್ರ ಸಮಿತಿಯ ವರದಿ:

ವಿಭಾಜಕ ಶಕ್ತಿಗಳ ವಿರುದ್ಧ ಹೋರಾಟ

(ಕಳೆದ ಸಂಚಿಕೆಯಿಂದ)

ಇತರ ಪಕ್ಷಗಳಲ್ಲಿರುವಂತಹ ಆಂತರಿಕ ಮುಗ್ಗಟ್ಟನ್ನು ಎದುರಿಸದೇ ಇರುವ ಒಂದೇ ಬೂರ್ಶ್ವಾ ವಿರೋಧ ಪಕ್ಷವೆಂದರೆ ಭಾರತೀಯ ಜನತಾ ಪಕ್ಷ. ಇದರ ಅರ್ಥ ಈ ಪಕ್ಷಕ್ಕೆ ಆಳುವ ಪಕ್ಷಕ್ಕಿಂತ ಬೇರೆಯಾದ ಕಾರ್ಯಕ್ರಮವಾಗಲೀ ಧೋರಣೆಯಾಗಲೀ ಇದೆಯೆಂದಲ್ಲ. ಮೂಲಭೂತವಾದ ಸಾಮಾಜಿಕ-ಆರ್ಥಿಕ ಪ್ರಶ್ನೆಗಳಲ್ಲಿ ಈ ಪಕ್ಷವೂ ಆಳುವ ಪಕ್ಷ ಅನುಸರಿಸುತ್ತಿರುವಂತಹ ಮಾರ್ಗವನ್ನೇ ಅನುಸರಿಸುತ್ತಿದೆ. ಬಿ.ಜೆ.ಪಿ. ಆರೆಸ್ಸೆಸ್‌ನ ಮುಖಾಂತರ ಹಿಂದೂ ಪುನರುತ್ಥಾನವಾದದ ಧೋರಣೆಯನ್ನು ಬಹಿರಂಗವಾಗಿ ಪ್ರತಿಪಾದಿಸುತ್ತಿದೆ. ಬಿ ಜೆ.ಪಿ.ಯ ಪ್ರಮುಖ ಮುಖಂಡರೆಲ್ಲ ಆರೆಸ್ಸೆಸ್‌ಗೇ ಸೇರಿದವರಾಗಿದ್ದಾರೆ. ಆಳುವ ಪಕ್ಷ ಮತ್ತು ಇತರ ಬೂರ್ಶ್ವಾ ವಿರೋಧ ಪಕ್ಷಗಳಿಂದ ಬಿ.ಜೆ.ಪಿ. ಬೇರೆಯಾಗಿರುವುದು ಇಲ್ಲೇ. ಮತ್ತು ಬಿ.ಜೆ.ಪಿ.ಯ ದೌರ್ಬಲ್ಯವೂ ಇದೇ ಆಗಿದೆ. ಆಳುವ ಪಕ್ಷಕ್ಕೆ ಬದಲಿಯಾಗಿ ಬೂರ್ಶ್ವಾ ವಿರೋಧ ಪಕ್ಷಗಳ ಪರ್ಯಾಯ ಶಕ್ತಿಗೆ ಬಿ.ಜೆ.ಪಿ. ಮುಖಂಡತ್ವ ನೀಡುವುದು ಅಸಾಧ್ಯ. ಯಾಕೆಂದರೆ ಆಳುವ ಪಕ್ಷ ಮತ್ತು ಇತರ ಪ್ರಮುಖ ವಿರೋಧ ಪಕ್ಷಗಳ ಹಿಂದಿರುವ ಸಾಮಾನ್ಯ ಜನತೆ ಪುನರುತ್ಥಾನವಾದ ಮತ್ತು ಮೂಢ ನಂಬಿಕೆಗಳ ಸಿದ್ಧಾಂತದ ಮೇಲೆ ಆಧರಿಸಲ್ಪಟ್ಟ ಹಿಂದೂ ರಾಷ್ಟ್ರದ ಕಲ್ಪನೆ, ಇಸ್ಲಾಮಿಕ್ ಮೂಲಭೂತವಾದ, ವಿದೇಶೀ ಕ್ರೈಸ್ತ ಮಿಶನರಿಗಳಿಂದ ಪ್ರೇರಿತವಾದ ಪ್ರತ್ಯೇಕತಾವಾದಿ ಚಳುವಳಿ ಮತ್ತು ಸಿಖ್ ಪ್ರತ್ಯೇಕತಾವಾದ ಇತ್ಯಾದಿಗಳನ್ನು ಖಂಡಿತವಾಗಿಯೂ ಬೆಂಬಲಿಸುವುದಿಲ್ಲ.

ಬಿ. ಜೆ. ಪಿ. ಯ ಮೂಲಕ ತನ್ನ ಕಾರ್ಯ ಸಾಧಿಸಿಕೊಳ್ಳುತ್ತಿರುವ, ಪುನರುತ್ಥಾನವಾದ ಮತ್ತು ಅಂಧ ವಿಶ್ವಾಸದ ಮೇಲೆ ನಿಂತಿರುವ ಆರೆಸ್ಸೆಸ್, ವಿದೇಶೀ ನೆರವು ಮತ್ತು ಪೆಟ್ರೋ ಡಾಲರ್‌ಗಳಿಂದಾಗಿ ಕೊಬ್ಬಿರುವ ಜಮಾಯತ್-ಎ-ಇಸ್ಲಾಮ್‌ನಂತಹ ಮುಸ್ಲಿಂ ಮೂಲಭೂತವಾದಿ ಸಂಸ್ಥೆಗಳು, ವಿದೇಶೀ ಕ್ರೈಸ್ತ ಮಿಶನರಿಗಳು ಮತ್ತು ಸಿಖ್ ಪ್ರತ್ಯೇಕತಾವಾದವನ್ನು ಪ್ರತಿಪಾದಿಸುವ ಬೇರೆ ಬೇರೆ ಗುಂಪುಗಳು ನಡೆಸಬಹುದಾದ ಅನಾಹುತ ಕಡಿಮೆಯೆಂದೇನೂ ಇದರ ಅರ್ಥ ಅಲ್ಲ. ಆಳುವ ಪಕ್ಷಕ್ಕೆ ಸವಾಲೆಸೆಯುವಷ್ಟು ಸಮರ್ಥವಾದ ಶಕ್ತಿಯಾಗಿ ಎಡ ವಿರೋಧ ಪಕ್ಷಗಳು ಎಲ್ಲೆಲ್ಲಿ ಬೆಳೆದಿಲ್ಲವೋ ಅಲ್ಲೆಲ್ಲ, ಈ ವಿಭಾಜಕ ಶಕ್ತಿಗಳು ಸಕ್ರಿಯವಾಗಿವೆ ಮತ್ತು ಜನರ ಬೆಂಬಲವನ್ನೂ ಗಳಿಸುತ್ತಿವೆ.

ಈಶಾನ್ಯ ಭಾರತ ಪ್ರದೇಶದ ಅಸ್ಸಾಮಿನಾ ಚಳುವಳಿ ಮತ್ತಿತರ ಪ್ರತ್ಯೇಕತಾವಾದಿಗಳು, ಜಮ್ಮು–ಕಾಶ್ಮೀರದ ಜಮಾಯತ್-ಎ-ಇಸ್ಲಾಮಿ, ಇತ್ಯಾದಿಗಳು ಆಯಾ ಪ್ರದೇಶದ ಶಾಂತಿ ಮತ್ತು ಭದ್ರತೆಗೆ ಗಂಡಾಂತರಕಾರಿಯಾಗಿರುವುದಷ್ಟೇಅಲ್ಲ, ದೇಶದ ಐಕ್ಯತೆ ಮತ್ತು ಸುಭದ್ರತೆಗೂ ಅವು ಅಪಾಯ ತಂದೊಡ್ಡಿವೆ.

ಮುಂದುವರಿದ ಜಾತಿಗಳು, ಹಿಂದುಳಿದ ಜಾತಿಗಳು, ಧಾರ್ಮಿಕ ಬಹುಸಂಖ್ಯಾತರು, ಅಲ್ಪ ಸಂಖ್ಯಾತರು, ಭಾಷಾ ಅಲ್ಪ ಸಂಖ್ಯಾತರು ಮತ್ತು ಬಹು ಸಂಖ್ಯಾತರು ಇವೆರೆಲ್ಲರನ್ನು ಪ್ರತಿನಿಧೀಕರಿಸುತ್ತಿರುವೆವೆಂದು ಹೇಳಿಕೊಳ್ಳುವ ಛಿದ್ರಕಾರಿ ಶಕ್ತಿಗಳ ಬಗ್ಗೆಯೂ ಈ ಮಾತು ಅನ್ವಯವಾಗುತ್ತದೆ. ಸಿ. ಪಿ. ಐ. (ಎಂ) ಮತ್ತಿತರ ಎಡ ಶಕ್ತಿಗಳು ಸಾಕಷ್ಟು ಪ್ರಬಲವಾಗಿಯೂ ಒಗ್ಗಟ್ಟಾಗಿಯೂ ಇಲ್ಲದಿರುವೆಡೆ ಇಂತಹ ಛಿದ್ರಕಾರಿ ಶಕ್ತಿಗಳನ್ನು ಜನತೆಯ ನಡುವೆ ಒಡಕನ್ನುಂಟು ಮಾಡುವಲ್ಲಿ ಬಳಸಲಾಗುತ್ತಿದೆ.

ಈ ದಿಸೆಯಲ್ಲಿ ಪ. ಬಂಗಾಳ ಮತ್ತು ತ್ರಿಪುರಾಗಳ ಎಡರಂಗ ಹಾಗೂ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗವು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಗಮನಿಸಬೇಕಾಗಿದೆ. ಈ ಮೂರೂ ರಾಜ್ಯಗಳಲ್ಲಿ ಎಲ್ಲೂ ಹಿಂದೂ ಪುನರುತ್ಥಾನವಾದಿಯಾದ ಆರೆಸ್ಸೆಸ್ ಎಡ ಶಕ್ತಿಗಳಿಗೆ ಸವಾಲೆಸೆಯುವ ಸಾಮರ್ಥ್ಯಹೊಂದಿಲ್ಲ.

ಇತರ ರಾಜ್ಯಗಳಿಗೆ ಹೋಲಿಸಿದರೆ, ಜಾತೀಯ, ಕೋಮುವಾದಿ ಮತ್ತಿತರ ವಿಭಾಜಕ ಶಕ್ತಿಗಳಿಂದ ಸಾಕಷ್ಟು ವಿಮುಕ್ತವಾಗಿರುವ ಪ. ಬಂಗಾಳದಲ್ಲಿ ಎಡರಂಗ ಸರಕಾರವು ಐದು ವರ್ಷಗಳ ತನ್ನ ಆಡಳಿತೆಯನ್ನು ಯಶಸ್ವಿಯಾಗಿ ಮುಗಿಸಿದೆ. ಇಲ್ಲಿ ಹೊಸ ಚುನಾವಣೆಗಳು ನಡೆದು ವಾಮರಂಗ ಮತ್ತೊಮ್ಮೆ ಅಮೋಘ ವಿಜಯ ಸಾಧಿಸಿದೆ.

ಆಳುವ ಪಕ್ಷ (ಕಾಂಗ್ರೆಸ್–ಐ) ತ್ರಿಪುರಾ ರಾಜ್ಯದಲೂ ಗುಡ್ಡಗಾಡು ಜನರ ಮತ್ತು ಬಂಗಾಳಿ ಜನತೆಯ ನಡುವೆ ಸಂಕುಚಿತವಾದದ ವಿಷವನ್ನು ಹರಡಲು ಸಾಕಷ್ಟು ಪ್ರಯತ್ನಿಸುತ್ತಿದ್ದರೂ ಸಿ.ಪಿ.ಐ. (ಎಂ)ನ ನೇತೃತ್ವದ ಎಡರಂಗವು ಆನಂದ ಮಾರ್ಗಿ ಮತ್ತು ಅದರ ಅಂಗ ಸಂಸ್ಥೆಯಾದ ಆಮ್ರ ಬಂಗಾಳಿ ಹಾಗೂ ತ್ರಿಪುರಾ ಉಪಜಾತಿ ಯುವ ಸಮಿತಿ ಇತ್ಯಾದಿ ವಿಚ್ಛಿದ್ರಕಾರಿ ಸಂಘಟನೆಗಳನ್ನು ಸೋಲಿಸುವಲ್ಲಿ ಯಶಸ್ವಿಯಾಗಿದೆ. ಇಲ್ಲೂ ಎಡರಂಗವು ಸದ್ಯದಲ್ಲೇ ತನ್ನ ಐದು ವರ್ಷಗಳ ಆಳ್ವಿಕೆಯನ್ನು ಸಂಪೂರ್ಣಗೊಳಿಸಲಿದೆ, ಮತ್ತು ಚುನಾವಣೆಗಳು ನಡೆದಾಗ ಅದರಲ್ಲಿ ಜಯಗಳಿಸುವ ಎಲ್ಲ ಸಾಧ್ಯತೆಗಳೂ ಎಡರಂಗಕ್ಕಿದೆ.

ಮುಸ್ಲಿಂ ಮತ್ತು ಕ್ರಿಶ್ಚಿಯನರು ಒಟ್ಟಾಗಿ ಸುಮಾರು ಶೇಕಡಾ 40 ಕ್ಕಿಂತಲೂ ಮಿಕ್ಕಿರುವ ಕೇರಳ ರಾಜ್ಯದಲ್ಲಿ ಆಳುವ ಪಕ್ಷವು ಈ ಎರಡೂ ಸಮುದಾಯಗಳಲ್ಲಿನ ಪ್ರತಿಗಾಮಿ ಮುಖಂಡರ ಮೇಲೆಯೇ ಹೆಚ್ಚಾಗಿ ಅವಲಂಬಿಸಿಕೊಂಡಿದೆ. ಆದರೆ ಇಲ್ಲೂ ಸಿ. ಪಿ. ಐ. (ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಸಾಧಿಸಿರುವ ಯಶಸ್ಸು ಅಲ್ಪವೇನಲ್ಲ. "ಮುಂದುವರಿದ" ಮತ್ತು "ಹಿಂದುಳಿದ" ಎರಡೂ ಜಾತಿಗಳನ್ನು ಪ್ರತಿನಿಧಿಸುವುದಾಗಿ ಹೇಳಿಕೊಂಡಿರುವ ಮತ್ತು ಕ್ರೈಸ್ತ ಹಾಗೂ ಮುಸ್ಲಿಂ ಅಲ್ಪಸಂಖ್ಯಾತರ ಧಾರ್ಮಿಕ ಮುಂದಾಳುಗಳ ಬೆಂಬಲ ಪಡೆದಿದ್ದ ಕಾಂಗ್ರೆಸ್ (ಐ) ಒಕ್ಕೂಟದ ವಿರುದ್ಧ ಸೆಣಸಿರುವ ಎಡರಂಗವು ಕಳೆದ ಮೇ 19ರ ಚುನಾವಣೆಯಲ್ಲಿ ಶೇ. 47 ರಷ್ಟು ಮತಗಳನ್ನೂ 45 ಸ್ಥಾನಗಳನ್ನೂ ಗಳಿಸಿದೆ. ಕಾಂಗ್ರೆಸ್ (ಐ) ನೇತೃತ್ವದ ಬೂರ್ಶ್ವಾ-ಭೂಮಾಲಿಕ ಆಡಳಿತೆಯ ವಿರುದ್ಧ ಮತ್ತು ಜಾತಿ ಮತಗಳ ನೆಲೆಯಲ್ಲಿ ಪ್ರತ್ಯೇಕತಾವಾದವನ್ನು ಹುಬ್ಬುತ್ತಿರುವ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸಿರುವ ಸಿ.ಪಿ.ಐ. (ಎಂ) ಎಲ್ಲಾ ಜಾತಿ ಮತ್ತು ಮತಗಳಿಗೆ ಸೇರಿರುವ ಜನವಿಭಾಗದಲ್ಲಿ ಗಣನೀಯ ಪ್ರಮಾಣದ ಜನರ ಬೆಂಬಲವನ್ನು ಗೆದ್ದುಕೊಂಡಿರುವುದೇ ಇದಕ್ಕೆ ಕಾರಣ.

ದೇಶದ ಇನ್ನಿತರ ಕಡೆ ಮುಖ್ಯವಾಗಿ ಸಿ.ಪಿ.ಐ. (ಎಂ) ಮತ್ತಿತರ ಎಡಪಕ್ಷಗಳು ದುರ್ಬಲವಾಗಿರುವ ಪ್ರದೇಶಗಳಲ್ಲಿ ಒಂದಲ್ಲೊಂದು ಪ್ರಕಾರದ ವಿಭಾಜಕ ಶಕ್ತಿಗಳು ಬೆಳೆದು ಬಂದಿದ್ದು ಅವು ಅಂತಹ ಪ್ರದೇಶಗಳಲ್ಲಿ ಆಸ್ಫೋಟಕ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿವೆ. ಆದರೂ ಈ ಜಾಗಗಳಲ್ಲೂ ವಿಭಾಜಕ ಶಕ್ತಿಗಳ ವಿರುದ್ಧ ಮತ್ತು ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಗಳನ್ನು ಕಾಪಾಡಿಕೊಳ್ಳಲು ಧೀರೋದಾತ್ತ ಹೋರಾಟಗಳು ನಡೆಯುತ್ತಿವೆ. ಸಿ.ಪಿ.ಐ. (ಎಂ) ಇದರಲ್ಲಿ ಅತಿ ಮುಖ್ಯ ಪಾತ್ರವಹಿಸುತ್ತಿದೆ.

ಅಸ್ಸಾಮಿನಲ್ಲಿ ಕಳೆದ ಮೂರು ವರ್ಷಗಳಿಂದಲೂ ಈ ವಿಭಾಜಕ ಶಕ್ತಿಗಳು ಸಕ್ರಿಯವಾಗಿವೆ. ಇವುಗಳಿಗೆ ಬಿ. ಜೆ. ಪಿ. ಜನತಾ ಪಕ್ಷ ಮತ್ತಿತರ ಬೂರ್ಶ್ವಾ ವಿರೋಧ ಪಕ್ಷಗಳ ಪ್ರಬಲ ಬೆಂಬಲವೂ ಇದ್ದಿತು. ಯಾಕೆಂದರೆ ಬೂರ್ಶ್ವಾ ವಿರೋಧ ಪಕ್ಷಗಳಿಗೆ ಕಾಂಗ್ರೆಸ್ (ಐ) ನ್ನು ಬಿಕ್ಕಟ್ಟಿನಲ್ಲಿ ಸಿಲುಕಿಸುವ ಯಾವುದೇ ಪ್ರಶ್ನೆಯಿದ್ದರೂ ಅದನ್ನು ಅವು ಉಪಯೋಗಿಸ ಬಯಸುತ್ತವೆ. ಬೂರ್ಶ್ವಾ ವಿರೋಧ ಪಕ್ಷಗಳ ಈ ಸಂದರ್ಭ ಸಾಧಕತನವಿಲ್ಲದಿರುತ್ತಿದ್ದರೆ ತಥಾಕಥಿತ 'ವಿದೇಶೀ ನಾಗರಿಕರ ಸಮಸ್ಯೆ'ಯನ್ನು ಪ್ರಜಾಸತ್ತಾತ್ಮಕ ವಿಧಾನದಲ್ಲಿ ಎಂದೋ ಬಗೆಹರಿಸಬಹುದಾಗಿತ್ತು.

ಕಾಂಗ್ರೆಸ್ (ಐ) ಕೂಡಾ ಅಸ್ಸಾಂ ಸಮಸ್ಯೆಗೆ ಪ್ರಜಾಸತ್ತಾತ್ಮಕ ಪರಿಹಾರ ಕಂಡುಕೊಳ್ಳುವುದರಲ್ಲಿ ಆಸಕ್ತಿ ಹೊಂದಿದಂತಿಲ್ಲ. ಅದಕ್ಕೆ ಅಸ್ಸಾಂನಲ್ಲಿ ಹೇಗಾದರೂ ಅಧಿಕಾರದ ಗದ್ದುಗೆಗೆ ಅಂಟಿಕೊಂಡಿರಬೇಕಾಗಿದೆ. ಅಷ್ಟೆ.

ಕಾಂಗ್ರೆಸ್ (ಐ)ನ ಅಧಿಕಾರ ಲಾಲಸೆಯಿಂದೊಡಗೂಡಿದ ಸಂದರ್ಭಸಾಧಕತನ ಮತ್ತು ಕೆಲವು ಬೂರ್ಶ್ವಾ ವಿರೋಧ ಪಕ್ಷಗಳ ಪ್ರತ್ಯೇಕತಾವಾದಿ ಚಳುವಳಿಗೆ ಅನುಕೂಲವಾಗುವ ಸಂದರ್ಭಸಾಧಕತನ ಇವೆರಡರ ವಿರುದ್ಧವೂ ಸಿ.ಪಿ.ಐ. (ಎಂ) ಮತ್ತು ಅದರ ಆರು ಮಿತ್ರ ಪಕ್ಷಗಳು ತತ್ವನಿಷ್ಠ ಹೋರಾಟ ನಡೆಸುತ್ತಿರುವುದು ನಿಜಕ್ಕೂ ಹರ್ಷದಾಯಕ.

ಜಮ್ಮು – ಕಾಶ್ಮೀರದಲ್ಲೂ ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಯಾದ ಜಮಾಯತೆ ಇಸ್ಲಾಮಿ ಭಾರತ ಒಕ್ಕೂಟದಿಂದ ಜಮ್ಮು–ಕಾಶ್ಮೀರವು ಪ್ರತ್ಯೇಕವಾಗಬೇಕೆಂಬ ಅಪಾಯಕಾರಿ ಪ್ರಚಾರ ನಡೆಸುವ ಮೂಲಕ ಅನಾಹುತವೆಸಗುತ್ತಿದೆ. ಈ ರಾಜ್ಯದಲ್ಲಿ ಸಿ. ಪಿ. ಐ. (ಎಂ)ನ ಕಾರ್ಯಕರ್ತರು ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿಲ್ಲದಿದ್ದರೂ, ಅವರು ರಾಷ್ಟ್ರದ ಐಕ್ಯತೆಯ ಪಾಲನೆಗಾಗಿ ಧೀರತನದ ಹೋರಾಟ ನಡೆಸುತ್ತಿದ್ದಾರೆ. ಇಲ್ಲಿನ ಕಾಂಗ್ರೆಸ್ (ಐ) ಪಕ್ಷವಾಗಲೀ ರಾಷ್ಟ್ರೀಯ ಕಾನ್ಫರೆನ್ಸ್ ಆಗಲೀ ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟ ನಡೆಸುತ್ತಿಲ್ಲ. ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್, ಮತ್ತು ವಿರಾಟ್ ಹಿಂದೂ ಸಮ್ಮೇಳನ ಇತ್ಯಾದಿಗಳು ಹಿಂದೂ ಕೋಮುವಾದಿಗಳನ್ನು ಬೆಂಬಲಿಸುವ ಮೂಲಕ ವಾಸ್ತವವಾಗಿ ಮುಸ್ಲಿಂ ಕೋಮುವಾದವು ಇನ್ನಷ್ಟು ಹಬ್ಬಲು ಅವಕಾಶ ಮಾಡಿಕೊಡುತ್ತಿವೆ.

ಪಂಜಾಬಿನಲ್ಲಿ ಸ್ವತಃ ಕಾಂಗ್ರೆಸ್(ಐ) ಪಕ್ಷವೇ ಎರಡು ಗುಂಪಾಗಿ ವಿಭಜಿಸಲ್ಪಟ್ಟಿದೆ. ಒಂದು ಗುಂಪು ಸಿಖ್ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುತ್ತಿದ್ದರೆ ಇನ್ನೊಂದು ಗುಂಪು ಹಿಂದೂಗಳನ್ನು ಬೆಂಬಲಿಸುತ್ತಿದೆ. ಬಿ. ಜೆ. ಪಿ. ಯ ಮುಖಾಂತರ ಕಾರ್ಯವೆಸಗುತ್ತಿರುವ ಆರೆಸ್ಸೆಸ್ ಮತ್ತು ಅಕಾಲಿ ಮುಂದಾಳುತ್ವದ ಕೆಲವೊಂದು ವಿಭಾಗಗಳ ನಡುವೆ ಸಕ್ರಿಯವಾಗಿರುವ ಸಿಖ್ ಅತಿರೇಕವಾದಿಗಳು ಹಿಂದೂ ಮತ್ತು ಸಿಖ್ ಸಮುದಾಯಗಳ ನಡುವೆ ವೈಷಮ್ಯವನ್ನು ಹಬ್ಬಿಸುತ್ತಿವೆ. ದೇಶದ ವಿಭಜನೆಗಿಂತ ಮೊದಲು ಸಿಖ್ ಮತ್ತು ಮುಸ್ಲಿಮರ ನಡುವೆ ಇದ್ದ ಕೋಮುವಾರು ವಿದ್ವೇಷದಷ್ಟೇ ಇಂದಿನ ಪರಿಸ್ಥಿತಿಯೂ ಗಂಭೀರವಾಗಿದೆ. ಸಿ.ಪಿ.ಐ. ಪಕ್ಷವೂ ಕಾಂಗ್ರೆಸ್‌ನ ಒಂದಲ್ಲೊಂದು ಗುಂಪಿನ ಜೊತೆಗೆ ಒಲವು ಇದ್ದಂತಹ ಪಕ್ಷ. ಸಿ.ಪಿ ಐ. ಅಕಾಲಿದಳದಲ್ಲಿ ಇರುವ ಬೇರೆ ಬೇರೆ ಗುಂಪುಗಳಲ್ಲಿ ಯಾವ ವ್ಯತ್ಯಾಸವನ್ನೂ ಕಾಣದೆ ಆ ಇಡೀ ಪಕ್ಷವನ್ನು ದ್ವೇಷಿಸುತ್ತಿದೆ. ಇದು ಪರಿಸ್ಥಿತಿ ಇನ್ನಷ್ಟು ಉದ್ರೇಕಗೊಳ್ಳಲು ಅವಕಾಶಮಾಡಿಕೊಡುತ್ತಿದೆ. ಪಂಜಾಬಿನ ಜನತೆ ತಮ್ಮ ನಡುವಿನ ಐಕ್ಯವನ್ನು ಕಾಪಾಡಿಕೊಳ್ಳುವಂತೆಯೂ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿಯ ಜೊತೆಗೆ ಅವರು ಸೇರಿಕೊಳ್ಳುವಂತೆಯೂ ಮಾಡಲು ರಾಜ್ಯದ ಸಿ.ಪಿ.ಐ. (ಎಂ)ನ ಕಾರ್ಯಕರ್ತರು ಅಪಾರ ಎಡರು ತೊಡರುಗಳನ್ನೆದುರಿಸಿ ಹೋರಾಡುತ್ತಿದ್ದಾರೆ. ಇದು ನಮಗೆ ಹೆಮ್ಮೆಯ ವಿಷಯ.

ಕರ್ನಾಟಕದಲ್ಲಿ ಗುಂಡೂರಾಯರ ಕಾಂಗ್ರೆಸ್ (ಐ) ಸರಕಾರ ಕನ್ನಡ ಮಾತಾಡುವ ಜನರನ್ನು ಭಾಷಾ ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುತ್ತಿದೆ. ಇಲ್ಲಿ ನಮ್ಮ ಪಕ್ಷವು ಇಂಗ್ಲೀಷಿನ ಸ್ಥಾನದಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕೆಂಬ ಕನ್ನಡಿಗರ ಸಹಜ ಆಕಾಂಕ್ಷೆಗೆ ಬೆಂಬಲ ನೀಡುವುದರ ಜೊತೆಗೇ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿಯೂ ಹೋರಾಡುತ್ತಿದೆ.

ಹೀಗೆ ದೇಶದ ಎಲ್ಲಡೆ ನಮ್ಮ ಪಕ್ಷವು ಜಾತಿವಾದಿ, ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಪ್ರವೃತ್ತಿಗಳ ವಿರುದ್ಧ ಹಾಗೂ ರಾಷ್ಟ್ರದ ಐಕ್ಯತೆಗಾಗಿ ಹೋರಾಡುತ್ತಿದೆ.

(ಮುಂದುವರೆಯುವುದು)

ಕಾಂ| ಮುಕುಂದ ಮಂಡಲ್

ಸಿ. ಪಿ. ಐ [ಎಂ] ಸಂಸತ್ ಸದಸ್ಯ ಕಾಂ| ಮುಕುಂದ ಮಂಡಲ್ ಅವರು ಅಕ್ಟೋಬರ್ 20ರಂದು ದೆಹಲಿಯಲ್ಲಿ ನಿಧನರಾದರು. ಅವರು ಮೂತ್ರಕೋಶದ ತೊಂದರೆಯಿಂದ ಬಳಲುತ್ತಿದ್ದರು. ಕಾಂ| ಮಂಡಲ್ ಅವರು ಪ. ಬಂಗಾಲದ ಮಥುರಾಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

24 ಪರಗಣ ಜಿಲ್ಲೆಯ ಹಳ್ಳಿಯೊಂದರಲ್ಲಿ ಜನಿಸಿದ ಕಾಂ| ಮಂಡಲ್‌ರವರು ವಿದ್ಯಾರ್ಥಿ - ಯುವಜನರ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. 1969 ರಿಂದ ರೈತರ ಕೃಷಿ ಕಾರ್ಮಿಕರನ್ನು ಸಂಘಟಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು.

(6ನೇ ಪುಟ ನೋಡಿ)

ನೆ ರೆ ಹೊ ರೆ

ಉತ್ತರ ಪ್ರದೇಶದ ಸಕ್ಕರೆ ಕೈಗಾರಿಕೆ :

ಬೆಳೆಗಾರನಿಗೆ ತಕ್ಕ ಪ್ರತಿಫಲವಿಲ್ಲ ಕಾರ್ಮಿಕರಿಗೆ ತಕ್ಕ ಕೂಲಿಯಿಲ್ಲ

ಉತ್ತರ ಪ್ರದೇಶದ ಸಕ್ಕರೆ ಕೈಗಾರಿಕೆಯಲ್ಲಿನ ಎರಡನೇ ವೇತನ ಒಪ್ಪಂದ ಡಿಸೆಂಬರ್ 82ರ ಅಂತ್ಯದೊಳಗೆ ಮುಗಿಯಲಿದೆ. ಅಗಾಧ ಲಾಭ ಸೂರೆಗೊಳ್ಳುತ್ತಿರುವ ಮಿಲ್ ಮಾಲೀಕರು,ಕಾರ್ಮಿಕರು ಹೆಚ್ಚು ಕೂಲಿ ಕೇಳದಂತೆಮಾಡುವ ದುರುದ್ದೇಶದಿಂದ ಕಬ್ಬಿನ ಉತ್ಪಾದನೆ ಹೆಚ್ಚಿ ಉಪಯೋಗಿಸಲಾರದಷ್ಟು ಕಬ್ಬು ರಾಶಿ ಬಿದ್ದು ತಮಗೆ ಬಹಳ ನಷ್ಟವಾಗಿದೆ ಎಂದು ಬೊಬ್ಬೆ ಹಾಕುತ್ತಿದ್ದಾರೆ. ಆದ್ದರಿಂದ ಕಬ್ಬಿನ ಬೆಲೆ ಇಳಿಸಿ ಕಾರ್ಮಿಕರ ಕೂಲಿಯಲ್ಲಿ ಯಾವುದೇ ಹೆಚ್ಚಳವನ್ನು ತಡೆಯಬೇಕು ಎಂಬುದು ಅವರ ಸಲಹೆ. ಕಬ್ಬು ಬೆಳೆಗಾರರಿಗೆ ಕೊಡಬೇಕಾದ 80 ಕೋಟಿ ರೂ.ಗಳನ್ನು ಬಾಕಿ ಇಟ್ಟುಕೊಂಡಿರುವ ಈ ಸಕ್ಕರೆ ದೊರೆಗಳು ಕಾರ್ಮಿಕರು-ಬೆಳೆಗಾರರ ನಡುವೆ ವೈಷಮ್ಯ ತಂದಿಟ್ಟು ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಈ ದುಷ್ಟ ಸಂಚನ್ನು ಮುರಿಯಲು ಸಕ್ಕರೆ ಕಾರ್ಮಿಕರ ಬೇಡಿಕೆಗಳನ್ನು ಪಡೆಯಲು ಹೋರಾಟ ನಡೆಸಬೇಕೆಂದು ಉತ್ತರ ಪ್ರದೇಶದಲ್ಲಿ ಸಿ.ಐ.ಟಿ.ಯು ಗೆ ಸೇರಿದ 17 ಯೂನಿಯನ್‌ಗಳ ಪ್ರತಿನಿಧಿಗಳು ಅಕ್ಟೋಬರ್ 17 ರಂದು ಸಭೆ ಸೇರಿ ನಿರ್ಧರಿಸಿದ್ದಾರೆ.

ಈ ಸಭೆಯಲ್ಲಿ ಸಕ್ಕರೆ ಕಾರ್ಮಿಕರ ಬೇಡಿಕೆಗಳನ್ನು ಪಟ್ಟಿಮಾಡಲಾಯಿತು. ಸಕ್ಕರೆ ಮಿಲ್ ಮಾಲೀಕರು ಅಗಾಧ ಲಾಭಗಳಿಸುತ್ತಿರುವಾಗ ಬೆಳೆಗಾರರಿಗೆ ಅವರಿಗೆ ಸಲ್ಲತಕ್ಕ ಹಣವನ್ನು ಪಾವತಿ ಮಾಡದೇ ಬಾಕಿ ಉಳಿಸುವುದಕ್ಕೆ ಯಾವುದೇ ಸರಿಯಾದ ಕಾರಣವಿಲ್ಲ ಎಂದೂ ಸಭೆಯಲ್ಲಿ ಅಭಿಪ್ರಾಯ ಪಡಲಾಯಿತು. ಆದ್ದರಿಂದ ಸಕ್ಕರೆ ಕಾರ್ಖಾನೆ ಕಾರ್ಮಿಕರ ಹಾಗೂ ಕಬ್ಬು ಬೆಳೆಗಾರರ ಸಂಯುಕ್ತ ಚಳುವಳಿಯನ್ನು ಸಂಘಟಿಸಬೇಕೆಂದು ನಿರ್ಧರಿಸಲಾಯಿತು. ಎಲ್ಲಾ ಹಂತಗಳಲ್ಲಿ ಕಿಸಾನ್ ಸಭಾದ ಘಟಕಗಳನ್ನು ಸಕ್ಕರೆ ಕಾರ್ಮಿಕರ ಹೋರಾಟಗಳಲ್ಲಿ ಸಹಭಾಗಿಗಳಾಗುವಂತೆ ಪ್ರಯತ್ನಿಸಬೇಕು; ಬೆಳೆಗೆ ಯೋಗ್ಯ ಬೆಲೆ ಕೊಡಬೇಕೆಂಬ ಘೋಷಣೆಯೊಂದಿಗೆ ಕಾರ್ಮಿಕರು ಕಬ್ಬು ಬೆಳೆವ ರೈತರ ಹೋರಾಟದಲ್ಲಿ ನೆರವು, ಬೆಂಬಲ ನೀಡಬೇಕೆಂದೂ ನಿರ್ಧರಿಸಲಾಯಿತು.

ಮಿಜೋರಾಮ್ :

ಗಡಿರಸ್ತೆ ಸಂಘಟನೆಯ ಕ್ಯಾಂಪಿನಲ್ಲಿ ಸ್ವಾತಂತ್ರ್ಯ ದಿನದಂದು ಗುಂಡಿನ ಸುರಿಮಳೆ

ಮಿಜೋರಾಮ್‌ನ ಲುಂಗ್‌ಲೇಹ್ ನಲ್ಲಿ ಗಡಿ ರಸ್ತೆಗಳ ಸಂಘಟನೆ (ಬಿ. ಆರ್. ಓ.)ಯು "ಪುಷ್ಪಕ ಯೋಜನೆ" ಯನ್ವಯ ರಸ್ತೆ ನಿರ್ಮಾಣ ನಡೆಯುತ್ತಿದೆ. ಇಲ್ಲಿ ಕೆಲಸ ಮಾಡುತ್ತಿದ್ದ ಬಿ.ಆರ್.ಓ.ದ ಸೈನಿಕೇತರ ನೌಕರರಲ್ಲಿ ಹಲವರನ್ನು ಈ ಆಗಸ್ಟ್ 15 ರಂದು ಸೈನಿಕರು ಹುಚ್ಚಾಪಟ್ಟೆ ಗುಂಡು ಹಾರಿಸಿ ಕೊಂದಿದ್ದಾರೆಂದು ಅಖಿಲ ಭಾರತ ಗಡಿ ರಸ್ತೆ ನೌಕರರ ಸಂಘ ಅಕ್ಟೋಬರ್ 26 ರಂದು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ. ತಕ್ಷಣ 6 ಜನ ಸತ್ತು 9 ಜನ ಗಾಯಗೊಂಡಿದ್ದಾರೆಂದು ಸುದ್ದಿ ಬಂದಿದೆ. ಅಂತಿಮ ಸ್ಥಿತಿ ಏನು ಎಂದು ಈಗಲೂ ತಿಳಿದಿಲ್ಲ. ಪಾನಮತ್ತ ಸೈನಿಕರು ಇದನ್ನು ನಡೆಸಿದರಂತೆ. ಈ ಬಗ್ಗೆ ಹೆಚ್ಚು ವಿವರ ತಿಳಿಯದಂತೆ ಇಲ್ಲಿನ ಸೈನಿಕ ಮುಖ್ಯಾಲಯ ವಿಶೇಷ ಎಚ್ಚರಿಕೆ ವಹಿಸುತ್ತಿದೆ.

ಗಡಿ ರಸ್ತೆ ನೌಕರರಿಗೆ 'ಸೇನಾ ಕಾನೂನು' ಅನ್ವಯವಾಗುವುದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು ಅದರ ತೀರ್ಪು ಸದ್ಯಕ್ಕೇ ಬರಲಿದೆಯೆಂದು ಇಲ್ಲಿ ಗಮನಿಸಬೇಕು. ಆಗಸ್ಟ್ 15 ರಂದು ಈ ಭಯಾನಕ ಹತ್ಯೆ ಏಕೆ ನಡೆಯಿತು ? ಹೇಗೆ ನಡೆಯಿತು, ಸೈನಿಕ ಕಾರ್ಯಾಲಯ ಈ ಬಗ್ಗೆ ಏನು ಮಾಡುತ್ತಿದೆ, ಕೇಂದ್ರದ ಸಾರಿಗೆ ಸಚಿವಾಲಯ ಏನು ಮಾಡುತ್ತಿದೆ ಇತ್ಯಾದಿ ಹಲವು ಪ್ರಶ್ನೆಗಳು ಈ ಸಂಬಂಧದಲ್ಲಿ ಏಳುತ್ತವೆ.

ಘಟನೆಯ ಬಗ್ಗೆ ಸತ್ಯವನ್ನು ಮುಚ್ಚಿಡುವ ಸೈನಿಕ ಕಾರ್ಯಾಲಯದ ಪ್ರಯತ್ನಗಳನ್ನು ಅಖಿಲ ಭಾರತ ಗಡಿ ರಸ್ತೆ ಕಾರ್ಮಿಕರ ಸಂಘ ತೀವ್ರವಾಗಿ ಖಂಡಿಸಿ, ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ತೊಂದರೆಗೊಳಗಾದವರಿಗೆ ಯೋಗ್ಯ ಪರಿಹಾರ ಕೊಡಬೇಕೆಂದು ಒತ್ತಾಯಿಸಿದೆ. ಈ ಭಯಾನಕ ಘಟನೆಯ ವಿರುದ್ಧ ತಮ್ಮ ಪ್ರತಿಭಟನೆಯ ದನಿಯೆತ್ತಬೇಕೆಂದು ಅದು ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೆ ಕರೆ ನೀಡಿದೆ.

ಬಿಹಾರ ಮಂತ್ರಿ ಮಂಡಲ :

ಹಸಿದಿರುವ ಜನತೆಯ ಕ್ರೂರ ಅಪಹಾಸ್ಯ

ಕಳೆದ ಒಂದು ತಿಂಗಳಲ್ಲೇ ನೂರಕ್ಕು ಹೆಚ್ಚು ಮಂದಿ ಹಸಿವಿನಿಂದ ಸತ್ತಿದ್ದು, ಸರಕಾರೀ ಲೆಕ್ಕಾಚಾರದ ಪ್ರಕಾರವೇ ರಾಜ್ಯದ 587 ಬ್ಲಾಕುಗಳಲ್ಲಿ 450 ಬ್ಲಾಕುಗಳು ಬರ, ನೆರೆ ಇತ್ಯಾದಿಗಳಿಂದ ತೀವ್ರ ಹಾನಿಗೊಳಗಾಗಿದ್ದು, 80 ಶೇಕಡಾ ಕ್ಕೂ ಹೆಚ್ಚು ಫಸಲು ನಷ್ಟವಾಗಿರುವಾಗ ಇತ್ತೀಚೆಗೆ ಬಿಹಾರದ ಮಂತ್ರಿ ಮಂಡಲ ಇಡೀ ರಾಜ್ಯವನ್ನು 'ಬರ ಪೀಡಿತ ಪ್ರದೇಶ' ಎಂದು ಘೋಷಿಸುವ ಬದಲು ಕಾಲುವೇ ನೀರಾವರಿ ಪ್ರದೇಶ ಬಿಟ್ಟು ಉಳಿದ ಭಾಗಗಳನ್ನು ಮಾತ್ರ 'ಅಭಾವ ಪೀಡಿತ ಪ್ರದೇಶ' ಎಂದು ಘೋಷಿಸಿದೆ. ಇದು ನಿಜಕ್ಕೂ ಹಸಿದ ಹೊಟ್ಟೆಯಿಂದ ಸರಕಾರದ ಕಡೆ ನೋಡುತ್ತಿರುವ ಬಡ ಬಿಹಾರೀ ಜನತೆಗೆ ಮಾಡಿರುವ ಕ್ರೂರ ಅಪಹಾಸ್ಯವೆ ಸರಿ. ಹೀಗೆ ಘೋಷಿಸಿದ ಮೇಲೆ ಪರಿಹಾರಕ್ಕಾಗಿ ಮೀಸಲಿಟ್ಟ ಧನರಾಶಿಯೂ ತೀರಾ ಅಲ್ಪ—'ಸಾಗರದಲ್ಲಿ ಒಂದು ತೊಟ್ಟಿನಷ್ಟು ನೀರಿದ್ದಂತೆ' ಈ ಅತ್ಯಲ್ಪ ಪರಿಹಾರವನ್ನು ಹಂಚುವ ಕೆಲಸವನ್ನೂ ಸಕಲ ಪಕ್ಷಗಳ ಸಮಿತಿಗೆ ಕೊಡದೆ ಆಳುವ ಪಕ್ಷದ ಹತೋಟಿಯಲ್ಲಿರುವ 20 ಅಂಶಗಳ ಸಮಿತಿಯ ಮೂಲಕ ನಡೆಸಲು ಯೋಚಿಸಲಾಗಿದೆ. ಹಿಂದಿನ ಅನುಭವಗಳ ಆಧಾರದಿಂದ ಹೇಳುವುದಾದರೆ ಈ ಅತ್ಯಲ್ಪ ಪರಿಹಾರವೂ ಇದರಿಂದ ಜನತೆಗೆ ತಲುಪದೇ ಹೋದರೆ ಆಶ್ಚರ್ಯವೇನಿಲ್ಲ.

ಸಿ.ಪಿ.ಐ. [ಎಂ]ನ ಬಿಹಾರ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಬಿಹಾರ ಮಂತ್ರಿ ಮಂಡಲದ ಈ ನಿಲುವನ್ನು ಬಲವಾಗಿ ಪ್ರತಿಭಟಿಸಿ ಸಂಪೂರ್ಣ ಬಿಹಾರವನ್ನು 'ಬರಪೀಡಿತ ಪ್ರದೇಶ' ವೆಂದು ಘೋಷಿಸಿ, ಪರಿಹಾರ ಧನರಾಶಿ ಹೆಚ್ಚಿಸಿ ಸಕಲ ಪಕ್ಷಗಳ ಸಮಿತಿಗಳ ಮೂಲಕ ಇದನ್ನು ಜನತೆಗೆ ಒದಗಿಸುವಂತೆ ಮಾಡಬೇಕೆಂದು ಒತ್ತಾಯಿಸಿದೆ.

ಅಲೀಘಡ್ ವಿಶ್ವವಿದ್ಯಾಲಯ :

ಪ್ರೊ. ಹಬೀಬ್ ದೋಷಮುಕ್ತರಾಗಿದ್ದಾರೆ

ಪ್ರಖ್ಯಾತ ಇತಿಹಾಸಜ್ಞ ಪ್ರೊ. ಇರ್ಫಾನ್ ಹಬೀಬರನ್ನು ಅಲೀಘಡ್ ಮುಸ್ಲಿಂ ವಿಶ್ವವಿದ್ಯಾಲಯದ ಉಪಕುಲಪತಿಗಳು ಸುಳ್ಳು ದೋಷಾರೋಪಮಾಡಿ 1981 ಆಗಸ್ಟ್ 2 ರಂದು ಸಸ್ಪೆಂಡ್ ಮಾಡಿದ್ದರು. ವಿಶ್ವವಿದ್ಯಾಲಯದಲ್ಲಿ ಕಾರ್ಯಕಾರೀ ಸಮಿತಿಯಲ್ಲಿ ಅವರು ಸರಿಯಾಗಿ ವರ್ತಿಸಲಿಲ್ಲ ಎಂಬ ಆರೋಪ ಅವರ ಮೇಲಿತ್ತು. ವಾಸ್ತವಾಗಿ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಸ್ವತಃ ಇರ್ಫಾನ್ ಹಬೀಬರೇ ಇತರ ಕೆಲವು ಪ್ರೊಫೆಸರುಗಳ ದುರ್ವರ್ತನೆಯನ್ನೆದುರಿಸಬೇಕಾಗಿ ಬಂತು. ಆ ಬಗ್ಗೆ ಉಪಕುಲಪತಿಗೆ ದೂರು ಕೊಟ್ಟಿದ್ದರೂ ಪ್ರತಿ ಕ್ರಿಯಾವಾದೀ ಹಾಗೂ ಕೋಮುವಾದೀ ಶಕ್ತಿಗಳಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳಲು ಉಪಕುಲಪತಿಗಳು ಇರ್ಫಾನ್ ಹಬೀಬರ ಮೇಲೇನೇ ದುರ್ವರ್ತನೆ ಆರೋಪ ಹೊರಿಸಿ ಅಪಪ್ರಚಾರ ನಡೆಸಲು ಯತ್ನಿಸಿದರು. ಈ ಬಗ್ಗೆ ನೇಮಿಸಿದ ವಿಚಾರಣಾ ಆಯೋಗದ ನ್ಯಾಯಮೂರ್ತಿ ಪ್ರೀತಂ ಸಿಂಗ್ ಸಫೀರ್ ಅವರು ಪ್ರೊಫೆಸರ್ ಹಬೀಬರ ಮೇಲೆ ಹೊರಿಸಿದ ಆರೋಪಕ್ಕೆ ಆಧಾರವಿಲ್ಲವೆಂಬುದು ಮೊದಲ ನೋಟದಲ್ಲೇ ತಿಳಿಯುವುದೆಂದೂ, ಪ್ರೊಫೆಸರ್ ಹಬೀಬ್ ಅಂತಹ ಸಂದರ್ಭದಲ್ಲಿ ಬೇರೆ ರೀತಿಯಲ್ಲಿ ವರ್ತಿಸಲು ಸಾಧ್ಯವಿರಲಿಲ್ಲವೆಂದು ಹೇಳಿ ಅವರನ್ನು ದೋಷಮುಕ್ತರೆಂದು ಈಗ ಘೋಷಿಸಿದ್ದಾರೆ. ಆದರೆ ಪ್ರೊ. ರಹಮಾನ್ ಅಲೀ ಖಾನ್ ಅವರ ವಿರುದ್ಧ ಪ್ರೊ. ಹಬೀಬ್ ನೀಡಿದ ದೂರಿನ ವಿಚಾರಣೆ ಮುಂದುವರಿಯುತ್ತದೆ ಎಂದೂ ನ್ಯಾಯಮೂರ್ತಿಗಳು ಹೇಳಿದ್ದಾರೆ.

ಪ್ರೊ. ಹಬೀಬರನ್ನು ಸಸ್ಪೆಂಡ್ ಮಾಡಿರುವುದು ಪ್ರತಿಕ್ರಿಯಾವಾದೀ ಶಕ್ತಿಗಳನ್ನು ಸಂಪ್ರೀತಗೊಳಿಸಲು ಎಂದು ಸಿ. ಪಿ. ಐ. [ಎಂ]ನ ಪಾಲಿಟ್ ಬ್ಯೂರೋ ಆಗ ಬಲವಾಗಿ ಖಂಡಿಸಿತ್ತು. ಸಿ. ಪಿ. ಐ. [ಎಂ]ನ ಈ ನಿಲುವು ಸರಿಯಾಗಿತ್ತೆಂದು ಈಗ ಸಿದ್ಧವಾದಂತಾಯಿತು.

ತ್ರಿಪುರಾ :

ಸೈತಾನ ನೀತಿಭೋಧಕನಾಗಬಲ್ಲನೇ ?

ಚುನಾವಣೆ ಸಮೀಪಿಸುತ್ತಿರುವಂತೆ ಕಳೆದ ಐದು ವರ್ಷಗಳ ಕಾಲ ತಮ್ಮ ಜನವಿರೋಧೀ ಕೃತ್ಯಗಳಿಂದ ಜನರ ತಿರಸ್ಕಾರಕ್ಕೊಳಗಾದ ಕೆಲವು ಪಕ್ಷಗಳು ಮುಖವಾಡ ಧರಿಸಲು ಪ್ರಯತ್ನ ಆರಂಭಿಸಿವೆ. ಸೈದ್ಧಾಂತಿಕವಾಗಿ ಪರಸ್ಪರ ವೈರುಧ್ಯಪೂರ್ಣವಾದ ನಿಲುವು ಹೊಂದಿರುವ ಕಾಂಗ್ರೆಸ್ (ಐ) ಹಾಗೂ ತ್ರಿಪುರಾ ಉಪಜಾತಿ ಜುಬಾ ಸಂಘಟನೆ (TUJS) ಇದುವರೆಗೆ ತಾವು ಏರ್ಪಡಿಸಿಕೊಂಡಿದ್ದ ಅಪವಿತ್ರ ಕೂಟವನ್ನು ಔಪಚಾರಿಕ ಮೈತ್ರಿಯಾಗಿ ಗಟ್ಟಿಗೊಳಿಸಲು ಪ್ರಯತ್ನಿಸುತ್ತಿವೆ. ಇದಕ್ಕೆ TUJS ಕೊಡುವ ಕಾರಣ ತ್ರಿಪುರಾದಲ್ಲಿ "ಪ್ರಜಾಪ್ರಭುತ್ವ ಹಕ್ಕು"ಗಳನ್ನು ಮತ್ತೆ ಸ್ಥಾಪಿಸಲು ತಮ್ಮ ಚುನಾವಣಾ ಮೈತ್ರಿ ಅಗತ್ಯ ಎಂದು. ಇದು ನಿಜಕ್ಕೂ ಸೈತಾನ ನೀತಿಭೋದೆ ಮಾಡಿದಂತೆ. ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಜನಾಂಗೀಯ ದ್ವೇಷ ಹಬ್ಬಿಸುವ, ತನ್ನ ಉದ್ದೇಶ ಸಾಧಿಸಲು ಗೂಂಡಾಗಿರಿಗಿಳಿಯುವ ಸಂಘಟನೆಯೊಂದು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದೆ. ತಾನು ಆಳ್ವಿಕೆ ನಡೆಸಿರುವ ರಾಜ್ಯಗಳಲ್ಲೆಲ್ಲಾ ಪ್ರಜಾಪ್ರಭುತ್ವ ಹಕ್ಕುಗಳ ಕತ್ತು ಹಿಸುಕಿ, ಕಾನೂನು ವ್ಯವಸ್ಥೆ ಸಂಪೂರ್ಣ ಕೆಟ್ಟು ಹೋಗಿದ್ದರೂ ಏನೂ ಮಾಡಲಾಗದ ಸ್ಥಿತಿಯಲ್ಲಿರುವ ಕಾಂಗ್ರೆಸ್ (ಐ), TUJS ನ 'ಪ್ರಜಾಪ್ರಭುತ್ವ ರಕ್ಷಣೆ'ಯ ಕಾರ್ಯದಲ್ಲಿ ಸುಯೋಗ್ಯ ಮಿತ್ರನೇ ಸರಿ. ವಾಸ್ತವವಾಗಿ ಕಳೆದ ಐದು ವರ್ಷಗಳಲ್ಲಿ ಆದಿವಾಸಿಗಳು ಹಾಗೂ ಇತರ ಜನ ಸಾಮಾನ್ಯರು ರಾಜ್ಯದ ಆಡಳಿತದಲ್ಲಿ ಪಾಲುಗೊಳ್ಳುವಂತೆ ಮಾಡಿ, ಇದುವರೆಗೆ ಪ್ರಜಾಪ್ರಭುತ್ವ ಹಕ್ಕು ಪಡೆಯದೇ ಇದ್ದ ಪೋಲೀಸು, ಜೈಲು ವಾರ್ಡರುಗಳು ಇತ್ಯಾದಿಯವರಿಗೂ ಸಂಘಟನೆಯ ಹಕ್ಕು ನೀಡಿ ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಆಧಾರವನ್ನು ವಿಸ್ತರಿಸಲು ಯಶಸ್ವೀ ಪ್ರಯತ್ನ ನಡೆದಿದೆ. ಐದು ವರ್ಷಗಳ ಹಿಂದೆ ಇದ್ದ ಪೋಲೀಸ್ ರಾಜ್ಯದಲ್ಲಿ ತಾವೀಗ ಬದುಕುತ್ತಿಲ್ಲವೆಂಬುದು ತ್ರಿಪುರಾದ ಜನಸಾಮಾನ್ಯರಿಗೆ ಚೆನ್ನಾಗಿ ಮನವರಿಕೆಯಾಗಿದೆ. ರಾಜ್ಯದ ಪ್ರಜಾಪ್ರಭುತ್ತ ಗಟ್ಟಿಗೊಂಡುದರಿಂದಲೇ TSUJ ನಂತಹ ರಾಷ್ಟ್ರ ವಿರೋಧೀ ಸಂಘಟನೆಗಳಿಗೆ ಕಾರ್ಯಚಟುವಟಿಕೆ ನಡೆಸಲು ಸಾಧ್ಯವಾಗದಿರುವುದು.

TUJS ಹಾಗೂ ಕಾಂಗ್ರೆಸ್(ಐ)ಗೆ ಇವೆಲ್ಲಾ ಗೊತ್ತಿಲ್ಲವೆಂದೇನಲ್ಲ. ಗೊತ್ತಿರುವುದರಿಂದಲೇ ಚುನಾವಣೆಯಲ್ಲಿ ಜನತೆಯನ್ನು ಎದುರಿಸಲು ಮುಖವಾಡಗಳಿಗಾಗಿ ಅವು ಹುಡುಕಾಡುತ್ತಿವೆ. TUJS ಆರಂಭದಿಂದಲೇ ತನ್ನ ಸಕ್ರಿಯ ಸದಸ್ಯರಾಗಿದ್ದ ಇಬ್ಬರು ಪ್ರಮುಖ ನಾಯಕರನ್ನು ಅವರು ತೀವ್ರಗಾಮಿಗಳೆಂದು ಹೇಳಿ ಸಂಘಟನೆಯಿಂದ ಹೊರಹಾಕಿದೆ. ಕಾಂಗ್ರೆಸ್(ಐ)ನೊಂದಿಗೆ ಮೈತ್ರಿ ಏರ್ಪಡಿಸಿಕೊಳ್ಳಬೇಕಾದರೆ ಸಂವಿಧಾನದ 6ನೇ ಷೆಡ್ಯೂಲನ್ನು ತ್ರಿಪುರಾಕ್ಕೂ ಅನ್ವಯಿಸುವುದಕ್ಕೆ ಕಾಂಗ್ರೆಸ್ (ಐ) ಒಪ್ಪಬೇಕೆಂದು TUJS ಷರತ್ತು ಹಾಕಿದೆ. ಆದರೆ ಇವೆರಡೂ ಕೇವಲ ಮುಖವಾಡಗಳು ಎಂಬುದು TUJS ಹಾಗೂ ಕಾಂಗ್ರೆಸ್ (ಐ)ನ ವಿಷಯ ತಿಳಿದವರಿಗೆ ಬೇರೆ ಹೇಳಬೇಕಾಗಿಲ್ಲ. TUJS ಮೊದಲಿನಿಂದಲೂ ಎರಡು ಹಂತಗಳಲ್ಲಿ—ಒಂದು ಪ್ರಕಟರೂಪದಲ್ಲಿ, ಇನ್ನೊಂದು ಗುಪ್ತ ತೀವ್ರಗಾಮೀ ಚಟುವಟಿಕೆಗಳ ಮೂಲಕ—ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಪ್ರಮುಖ ತೀವ್ರಗಾಮಿಗಳನ್ನು ಸಂಘಟನೆಯಿಂದ ಹೊರಹಾಕಿ ತನ್ನ ತೀವ್ರಗಾಮಿ ಗೂಂಡಾಗಿರಿಯನ್ನು ಬಿಟ್ಟುಕೊಡುತ್ತದೆ ಎಂದು ಯಾರೂ ನಂಬಲಾರರು. ಅದೇ ರೀತಿ ಆದಿವಾಸಿ ಸ್ವಯಂಮಾಡಳಿತದ ಹೆಸರು ಹೇಳಿದರೇ ಹಿಂಜರಿಯುವ ಕಾಂಗ್ರೆಸ್ [ಐ] ಈ ಸಂಬಂಧದ ಸಂವಿಧಾನದ ಆರನೇ ಷೆಡ್ಯೂಲನ್ನು ತ್ರಿಪುರಾಕ್ಕೆ ಅನ್ವಯಿಸಲು ಒಪ್ಪುವುದೆಂದೂ ಯಾರೂ ನಿರೀಕ್ಷಿಸಲಾರರು ಕೇಂದ್ರದಲ್ಲಿನ ಕಾಂಗ್ರೆಸ್ [ಐ] ಸರಕಾರ ಹಾಗೂ ಅವರ ಮೊದಲಿದ್ದ ಜನತಾ ಸರಕಾರ

ಇದಕ್ಕೆ ಒಪ್ಪದ್ದರಿಂದಲೇ ತ್ರಿಪುರಾದ ಎಡರಂಗ ಸರಕಾರ ಸಂವಿಧಾನದ 7ನೇ ಷೆಡ್ಯೂಲಿನ ಪ್ರಕಾರ ಆದಿವಾಸಿ ಸ್ವಯಂ ಮಾಡಳಿತ ಮಂಡಳಿಗಳನ್ನು ರಚಿಸಬೇಕಾಯಿತು; ಇದರಿಂದಾಗಿ ಈ ಮಂಡಳಿಗಳು ಕೆಲವು ಮಿತಿಯೊಳಗೇ ಕೆಲಸ ನಿರ್ವಹಿಸಬೇಕಾಗಿ ಬಂದಿದೆಯೆಂಬುದೂ ಇಲ್ಲಿ ಗಮನಿಸಬೇಕಾದ ಅಂಶ. ಕಾಂಗ್ರೆಸ್ [ಐ] ಈ ಸೀಮಿತ ವ್ಯಾಪ್ತಿಯುಳ್ಳ ಆದಿವಾಸಿ ಸ್ವಯಂಮಾಡಳಿತ ಮಂಡಳಿಗಳನ್ನೂ ತೀವ್ರವಾಗಿ ವಿರೋಧಿಸಿ ಅದರ ಕಾರ್ಯಾನ್ವಯದಲ್ಲಿ ಅಡ್ಡಿಯೊಡ್ಡಲು ಪ್ರಯತ್ನಿಸುತ್ತಾ ಬಂದಿದೆ. ಇಂತಹ ಕಾಂಗ್ರೆಸ್ [ಐ] TUJSನ ಷರತ್ತಿಗೆ ಪ್ರಾಮಾಣಿಕವಾಗಿ ಒಪ್ಪುತ್ತದೆ ಎಂದು ಯಾರೂ ನಿರೀಕ್ಷಿಸಲಾರರು. ಸ್ವತಃ TUJS ಕೂಡಾ ನಿರೀಕ್ಷಿಸಲಾರದು. ಆದರೂ ಜನತೆಯ ಎದುರು ಬರಲು ಏನಾದರೂ ಮುಖವಾಡಗಳು ಬೇಕು ತಾನೇ ? ಇದರ ಪರಿಣಾಮವೆಂದರೆ ಈ ಪಕ್ಷಗಳ ಚುನಾವಣಾ ಘೋಷಣೆಗಳಲ್ಲಿ ಇನ್ನಷ್ಟು ಅರ್ಥಹೀನ ಆಶ್ವಾಸನೆಗಳು ಸೇರುತ್ತವೆ.

ಕೇರಳ ಆಳುವ ರಂಗದಲ್ಲಿ ಕಿತ್ತಾಟ

ಅಕ್ಟೋಬರ್ 25 ರಂದು ತನ್ನ ಅಧಿಕಾರದ 5 ತಿಂಗಳು ಮುಗಿಸಿದ ಕಾಂಗ್ರೆಸ್ [ಐ] ನೇತೃತ್ವದ ಸರಕಾರ ತನ್ನ ಐದು ವರ್ಷಗಳ ಅವಧಿ ಮುಗಿಸುತ್ತದೆ ಎಂದು ಮುಖ್ಯ ಮಂತ್ರಿ ಕರುಣಾಕರನ್ ಭರವಸೆ ವ್ಯಕ್ತಪಡಿಸಿದ್ದಾರೆ. ಆದರೆ ವಾಸ್ತವತೆ ಬೇರೆಯೇ ಆಗಿದೆ. ಕೇರಳ ವಿಧಾನ ಸಭೆಗೆ ನೇಮಿಸಬೇಕಾಗಿರುವ ಆ್ಯಂಗ್ಲೋ–ಇಂಡಿಯನ್ ಪ್ರತಿನಿಧಿಯ ಬಗ್ಗೆ ಆಳುವ ರಂಗದ ದೊಡ್ಡ ಘಟಕಗಳಾದ ಕಾಂಗ್ರೆಸ್ [ಐ] ಹಾಗೂ ಅಂತೋಣಿ-ಕಾಂಗ್ರೆಸ್ ನಡುವೆ ತೀವ್ರ ಕಿತ್ತಾಟ ನಡೆಯುತ್ತಿದೆ. ಹಿಂದೆ ಅನುಸರಿಸಿದ ನೀತಿಯಂತೆ ಈ ಹಿಂದಿನ ಸದಸ್ಯರಾದ ಸ್ಟೀಫನ್ ಪಡುವಾರದರೇ ಮತ್ತೆ ನೇಮಕಗೊಳ್ಳಬೇಕೆಂದು ಅಂತೋಣಿ ಕಾಂಗ್ರೆಸ್ ಬಯಸಿದರೆ, ಕಾಂಗ್ರೆಸ್[ಐ] ಪ್ರಧಾನ ಮಂತ್ರಿಯವರ ಬೆಂಬಲಿಗರಾದ ಫ್ರಾಂಕ್ ಆ್ಯಂಟನಿಯವರು ಬಯಸುವವರನ್ನು ನೇಮಿಸಬೇಕೆಂದು ಬಯಸಿದೆ. ಇದರಿಂದಾಗಿ ಹೊಸ ವಿಧಾನ ಮಂಡಲದ ಎರಡು ಅಧಿವೇಶನಗಳು ಮುಗಿದರೂ ಈ ಸ್ಥಾನ ಖಾಲಿ ಉಳಿದಿದೆ. ಅಲ್ಲದೆ ಹಿಂದೊಮ್ಮೆ ಈ ಎರಡು ಕಾಂಗ್ರೆಸ್‌ಗಳ ವಿಲೀನ ಅನಿವಾರ್ಯ ಎಂಬ ಪರಿಸ್ಥಿತಿ ಮಾಯವಾದಂತಿದೆ.

ರಂಗದ ದೊಡ್ಡ ಘಟಕಗಳ ಸ್ಥಿತಿ ಹೀಗಾದರೆ ಸಣ್ಣ ಘಟಕಗಳ ಸ್ಥಿತಿಯೂ ಉತ್ತಮವೇನಿಲ್ಲ. ಹಣಕಾಸು ಮಂತ್ರಿಗಳ ಕೇರಳ ಕಾಂಗ್ರೆಸ್ (ಮಣಿ)ಕೇರಳದ ಬೆಳೆಗಾರರ ಬಗ್ಗೆ ಕೇಂದ್ರದ ನಿಲುವನ್ನು ಬಲವಾಗಿ ವಿರೋಧಿಸಿದೆ. ಎರಡು ಕೇರಳ ಕಾಂಗ್ರೆಸ್‌ಗಳವರು ಪರಸ್ಪರ ದೋಷಾರೋಪಣೆ ನಡೆಸುತ್ತಿದ್ದಾರೆ. ಅತ್ತ ಇನ್ನೊಂದು ಘಟಕ ಪಕ್ಷವಾದ ಎಸ್. ಆರ್. ಪಿ. ಯು ಎರಡು ಬಣಗಳು ಪರಸ್ಪರ ಒಬ್ಬರು ಇನ್ನೊಬ್ಬರನ್ನು ಪಕ್ಷದಿಂದ ಉಚ್ಚಾಟನೆ ನಡೆಸುತ್ತಿದ್ದಾರೆ. ಎರಡು ಎಂ. ಎಲ್. ಎ. ಗಳಿರುವ ಈ ಪಕ್ಷದ ಒಬ್ಬ ಸದಸ್ಯರು ಮಂತ್ರಿಯಾಗಿದ್ದಾರೆ. ಅವರು ಪಕ್ಷದ ಅಧ್ಯಕ್ಷರೂ ಆಗಿದ್ದು ಪಕ್ಷದ ಇನ್ನೊಬ್ಬ ಎಂ.ಎಲ್.ಎ.ಯವರನ್ನು ಪಕ್ಷದಿಂದ 'ಉಚ್ಚಾಟನೆ' ಮಾಡಿದ್ದಾರೆ ! ಇನ್ನೊಂದು ಘಟಕ ಪಕ್ಷವಾದ ಡಿ. ಎಲ್.ಪಿ. ಏಕಮಾತ್ರ ಸದಸ್ಯರನ್ನು ಹೊಂದಿದ್ದು ಮಂತ್ರಿ ಮಂಡಲದಲ್ಲಿ ಸ್ಥಾನ ಕೊಡದಿದ್ದರೆ ಸರಕಾರಕ್ಕೆ ಬೆಂಬಲ ಮುಂದುವರಿಸುವುದಿಲ್ಲ ಎಂದು ಬೆದರಿಸಿದೆ.

ಈ ಎಲ್ಲದರ ನಡುವೆ ಕೇರಳ ಆಳುವ ರಂಗದ ಜನವಿರೋಧಿ ಧೋರಣೆಗಳು ಮತ್ತಷ್ಟು ಬೆಳಕಿಗೆ ಬರುತ್ತಿವೆ. ಎಡ ಪ್ರಜಾಪ್ರಭುತ್ವರಂಗ ಅಧಿಕಾರದಲ್ಲಿದ್ದಾಗ ನಿರುದ್ಯೋಗ ಭತ್ಯೆ ನೀಡುವ ಯೋಜನೆಯನ್ನು ಜ್ಯಾರಿಗೆ ತಂದಿತ್ತು. ಆ ಸರಕಾರ ರಾಜೀನಾಮೆ ನೀಡಿದಂದಿನಿಂದಲೇ ಈ ಭತ್ಯೆಯನ್ನು ನಿಲ್ಲಿಸಲಾಯಿತು. ಇತ್ತೀಚೆಗೆ ಆಳುವ ರಂಗಕ್ಕೆ ಸೇರಿದ ಪಕ್ಷಗಳ ಯುವ ಸಂಘಟನೆಗಳೂ ಸೇರಿದಂತೆ ಎಲ್ಲಾ ಯುವ ಸಂಘಟನೆಗಳು ಚಳುವಳಿ ಮಾಡಿದ್ದರಿಂದ ಅದನ್ನು ಈಗ ಮತ್ತೆ ಆರಂಭಿಸಲಾಗಿದೆ. ಆದರೆ ಅದನ್ನು ಸಂಪೂರ್ಣ ವಿರೂಪಗೊಳಿಸಿ ಅದನ್ನು ಕೇವಲ ತಮಾಷೆಯ ಮಟ್ಟಕ್ಕಿಳಿಸಲಾಗಿದೆ. ಇದಕ್ಕೂ ಎಲ್ಲಾ ಯುವ ಸಂಘಟನೆಗಳು ತಮ್ಮ ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿವೆ. ಎಡ–ಪ್ರಜಾಪ್ರಭುತ್ವರಂಗ ರೂಪಿಸಿದ ಯೋಜನೆಯನ್ನು ಏನೊಂದೂ ಬದಲಾವಣೆಗಳಿಲ್ಲದೆ ಜ್ಯಾರಿಗೊಳಿಸಬೇಕೆಂದು ಒತ್ತಾಯಿಸಿವೆ.

ಭಿಲಾಯ್ :

ಕಾಂಟ್ರ್ಯಾಕ್ಟ್ ಕಾರ್ಮಿಕರ ಮೇಲೆ ದಬ್ಬಾಳಿಕೆ

ಗಣಿಗಳಲ್ಲಿ ಹಾಗೂ ಇತರೆಡೆಗಳಲ್ಲಿ ದುಡಿಯುವ ಕಾಂಟ್ರ್ಯಾಕ್ಟ್ ಕಾರ್ಮಿಕರು ಇಬ್ಬಗೆಯ ಶೋಷಣೆಗೊಳಗಾಗಿರುತ್ತಾರೆ—ಒಂದೆಡೆ ಕಂಟ್ರ್ಯಾಕ್ಟರ್ ಅವರನ್ನು ಶೋಷಿಸಿದರೆ, ಇನ್ನೊಂದೆಡೆ ಕಂಪೆನಿಯ ಆಡಳಿತವರ್ಗ ಅವರ ರಕ್ತ ಹೀರುತ್ತದೆ. ಭಿಲ್ಯಾಯಲ್ಲಿರುವ ಕೋಲ್ಡ್ ಪಿಗ್ ಐಯರ್ನ್ ಯಾರ್ಡ್‌ನ ಇಂತಹ ಕಾರ್ಮಿಕರು ತಮ್ಮ ಶೋಷಣೆಯ ವಿರುದ್ಧ ಸಂಘಟಿತರಾಗಿದ್ದರಿಂದ ಯಾರ್ಡ್‌ನ ಆಡಳಿತ ವರ್ಗ ಹಾಗೂ ಇಂಟಕ್ ಗೂಂಡಾಗಳ ದಬ್ಬಾಳಿಕೆ ಎದುರಿಸಬೇಕಾಗಿ ಬಂದಿದೆ.

ಅಕ್ಟೋಬರ್ 10 ರಂದು ಸಿ.ಐ.ಟಿ.ಯು.ಗೆ ಸೇರಿದ 346 ಕಾರ್ಮಿಕರು ಕೂಲಿ ಬಾಕಿ ಹಾಗೂ ಗೇಟ್ ಪಾಸ್‌ಗಳನ್ನು ನೀಡಬೇಕೆಂದು ಒತ್ತಾಯ ಮಾಡಿ ಪ್ರದರ್ಶನ ನಡೆಸಿದಾಗ ಪೋಲೀಸರು ಅವರ ಮೇಲೆ ಅಮಾನುಷ ದಾಳಿ ನಡೆಸಿದರು. ಯಾರ್ಡ್‌ನೊಳಗಿದ್ದ ಈ ಬಡ ಕಾರ್ಮಿಕರ ಗುಡಿಸಲುಗಳನ್ನೆಲ್ಲ ನೆಲಸಮ ಮಾಡಿ ಹೆಂಗಸರು, ಮಕ್ಕಳೆನ್ನದೆ ಸಿಕ್ಕಾಪಟ್ಟೆ ಸದೆಬಡೆದರು. 134 ಪೋರ್ಟರುಗಳನ್ನು, 126 ಕೂಲಿಗಾರರನ್ನು ಹಾಗೂ 106 ಮಕ್ಕಳನ್ನು ಜೇಲಿಗೆ ತಳ್ಳಲಾಯಿತು.

ಅಕ್ಟೋಬರ್ 13 ರಂದು ಸಿ.ಐ.ಟಿ.ಯು.ಗೆ ಸೇರಿದ ಹಿಂದೂಸ್ತಾನ್ ಸ್ಟೀಲ್ ನೌಕರರ ಸಂಘ ಹೋರಾಟನಿರತ ಕಾಂಟ್ರ್ಯಾಕ್ಟ್ ಕಾರ್ಮಿಕರ ಬೇಡಿಕೆಗಳಿಗೆ ಬೆಂಬಲ ಸೂಚಿಸಿ, ಅವರ ಮೇಲೆ ಪೋಲೀಸರ ಅನ್ಯಾಯದ ಕ್ರಮವನ್ನು ಪ್ರತಿಭಟಿಸಿ ಮತಪ್ರದರ್ಶನ ನಡೆಸಿದರು.

ಅಕ್ಟೋಬರ್ 14 ರಂದು ಸಿ.ಪಿ.ಐ.(ಎಂ)ನ ಮಧ್ಯ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಮೋತಿಲಾಲ್ ಶರ್ಮ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ ಕಾರ್ಮಿಕ ವರ್ಗದ ಎಲ್ಲಾ ವಿಭಾಗಗಳೂ ಕಾಂಟ್ರ್ಯಾಕ್ಟ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಕರೆ ನೀಡಿದರು.

ಅಕ್ಟೋಬರ್ 16 ರಂದು ಬಂಧಿತ ಕಾರ್ಮಿಕರ ಬಿಡುಗಡೆಯಾಗಿದ್ದು, ಅವರಲ್ಲಿ 350 ಜನರನ್ನು ಕೆಲಸದಿಂದ ತೆಗೆದು ಹಾಕಿದ್ದರೂ ಜಗ್ಗದೆ ಅವರು ತಮ್ಮ ಹೋರಾಟ ಮುಂದುವರಿಸುತ್ತಿದ್ದಾರೆ. ಈ ನಡುವೆ ಇಂಟಕ್ ನಾಯಕತ್ವ, ಕಾಂಟ್ರ್ಯಾಕ್ಟರ್ ಹಾಗೂ ಕಂಪೆನಿಯ ಆಡಳಿತವರ್ಗದ ನಿಜವಾದ ಬಣ್ಣ ಎಲ್ಲಾ ಕಾರ್ಮಿಕರಿಗೆ ಚೆನ್ನಾಗಿ ಮನದಟ್ಟಾಗಿದೆ. ಕಾರ್ಮಿಕರ ನಡುವಿನ ಒಗ್ಗಟ್ಟು ಇದರಿಂದ ಇನ್ನಷ್ಟು ದೃಢಗೊಳ್ಳುತ್ತಿದೆ.

ತಮಿಳುನಾಡು ಕಾರ್ಮಿಕರಿಗೆ

ಹಬ್ಬದ ದಿನಗಳೀಗ ಬೋನಸ್ ಹೋರಾಟದ ದಿನಗಳು

ಬೋನಸ್ ಕಾನೂನೆಂಬುದು ಕಾರ್ಮಿಕರ ದ್ವೇಷಕ್ಕೆ ಗುರಿಯಾಗಿರುವ ಕಾನೂನು ಬಂಡವಾಳಶಾಹಿಗಳ ಲಾಭಕ್ಕೆ ಮಿತಿ ಹೇರಲಾರದ ಸರಕಾರ ಕಾರ್ಮಿಕರ ಬೋನಸ್ ಮೇಲೆ ಮಿತಿ ಹೇರಿದೆ. ಆದರೆ ಕಾರ್ಮಿಕರು ತಮ್ಮ ಹೋರಾಟಗಳ ಮೂಲಕ ಈ ಮಿತಿಗಿಂತ ಹೆಚ್ಚಿನ ಬೋನಸ್ ಪಡೆಯಲು ಶಕ್ತರಾಗಿದ್ದಾರೆ. ತಮಿಳುನಾಡಿನ ಕೈಗಾರಿಕೋದ್ಯಮಿಗಳು ಮಾತ್ರ ಈಗ ಏಕ್‌ದ 'ಕಾನೂನಿಗೆ ತಲೆ ಬಾಗುವ' ಪ್ರಜೆಗಳಾಗಿಬಿಟ್ಟಿದ್ದಾರೆ. ಕಾರ್ಮಿಕರ ಭವಿಷ್ಯ ನಿಧಿ, ಕನಿಷ್ಟ ವೇತನ ಇತ್ಯಾದಿಗಳಲ್ಲಿ ಕಾನೂನನ್ನು ಎಗ್ಗಿಲ್ಲದೆ ಮುರಿಯುವ ಈ ಉದ್ಯಮಿಗಳು ತಮಗೆ ಲಾಭದಾಯಕವಾಗಿರುವ ಬೋನಸ್ ಕಾನೂನಿನ ಕಡೆ ಬೆಟ್ಟು ಮಾಡಿ ತಮ್ಮ ಕಾರ್ಮಿಕರು ತಮಗಾಗಿ ದುಡಿದು ಕೊಟ್ಟ ಅಗಾಧ ಲಾಭದಲ್ಲಿ ನ್ಯಾಯ ಪಾಲು ಕೊಡಲು ನಿರಾಕರಿಸುತ್ತಿದ್ದಾರೆ. ಆದ್ದರಿಂದ ತಮಿಳುನಾಡಿನ ಹಲವು ಕೈಗಾರಿಕೆಗಳಲ್ಲಿ ಈಗ ಬೋನಸ್‌ಗಾಗಿ ತೀವ್ರ ಹೋರಾಟಗಳು ಆರಂಭವಾಗಿವೆ.

ತಮಿಳುನಾಡು ಹಾಗೂ ಪಾಂಡಿಚೇರಿಯ ಒಂದೂವರೆ ಲಕ್ಷ ಬಟ್ಟೆ ಗಿರಣಿ ಕಾರ್ಮಿಕರು ಒಂದು ಒಪ್ಪಂದದ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಕನಿಷ್ಟ 12%, ಗರಿಷ್ಟ 32% ಬೋನಸ್ ಪಡೆಯುತ್ತಿದ್ದರು. ಆದರೆ ಈ ಸಲ ಬಟ್ಟೆ ಕೈಗಾರಿಕೋದ್ಯಮಿಗಳು ತಾವು 'ಬೋನಸ್ ಕಾನೂನಿ'ನ ಪ್ರಕಾರ ಮಾತ್ರ ಬೋನಸ್ ಕೊಡುವುದೆಂದು ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಆಳುವ ಪಕ್ಷದ ಕಾರ್ಮಿಕ ಸಂಘಟನೆಯೂ ಸೇರಿದಂತೆ ಎಲ್ಲಾ ಕಾರ್ಮಿಕ ಸಂಘಗಳು ಜಂಟೀ ಹೋರಾಟಕ್ಕೆ ಸಿದ್ಧತೆ ನಡೆಸಿವೆ. ಅಕ್ಟೋಬರ್ 18 ರಂದು ಈ ಬಗ್ಗೆ ಕೊಯಮತ್ತೂರಿನಲ್ಲಿ ಸಮಾವೇಶ ನಡೆದು ಈ ಹಿಂದಿನಂತೆ ಬೋನಸ್ ಕೊಡಲು ಒತ್ತಾಯಮಾಡಲಾಯಿತು. ತಮ್ಮ ಬೇಡಿಕೆ ಈಡೇರದಿದ್ದರೆ ನವೆಂಬರ್ 11 ರಿಂದ ಅನಿರ್ದಿಷ್ಟ ಮುಷ್ಕರ ಹೂಡಲು ಅಲ್ಲಿ ನಿರ್ಧರಿಸಲಾಯಿತು.

ಸರಕಾರದ ದ್ವಿಮುಖ ಧೋರಣೆಯಿಂದ ಇದುವರೆಗೆ ಎಂದೂ ಸಾಧ್ಯವಾಗದಷ್ಟು ಪ್ರಮಾಣದ ಲಾಭಗಳಿಸಿ ಸಿಮೆಂಟ್ ಕೈಗಾರಿಕೋದ್ಯಮದಲ್ಲೂ ಕಾರ್ಮಿಕರು ಬೋನಸ್‌ಗಾಗಿ ಹೋರಾಟ ಆರಂಭಿಸಿದ್ದಾರೆ. ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಏರ್ಪಟ್ಟು ಅಗತ್ಯಬಿದ್ದರೆ ನವಂಬರ್ 4 ಅಥವಾ ನಂತರ ಮುಷ್ಕರ ಹೂಡಲು ನಿರ್ಧರಿಸಲಾಗಿದೆ. ಶೇ. 37 ಬೋನಸ್ ಕೊಡಬೇಕೆಂದು ಕಾರ್ಮಿಕ ಸಂಘಗಳು ಒತ್ತಾಯ ಮಾಡಿದೆ.

ಸರಕಾರೀ ಹತೋಟಿಯಲ್ಲಿರುವ ಸಾರಿಗೆ ವಿಭಾಗದಲ್ಲಿ ಕಾರ್ಮಿಕರ ಪ್ರತಿನಿಧಿಗಳನ್ನು ಕೇಳದೆ ತನಗೆ ತೋಚಿದಂತೆ ಬೋನಸ್ ಬಗ್ಗೆ ನಿರ್ಧರಿಸುವ ಅಭ್ಯಾಸ ಸರಕಾರ ಬೆಳೆಸಿಕೊಂಡಿದೆ. ಅಲ್ಲದೆ ಎರಡು ವರ್ಷಗಳ ಹಿಂದೆ ಸಾರಿಗೆ ಕಾರ್ಮಿಕರ ಕೆಲವು ಕುಂದುಕೊರತೆಗಳ ಬಗ್ಗೆ ತಕ್ಷಣ ಮಾತುಕತೆ ನಡೆಸುವ ಮಾತುಕೊಟ್ಟು ಅದನ್ನು ಇದುವರೆಗೂ ಪಾಲಿಸಿಲ್ಲ. ಇದನ್ನು ವಿರೋಧಿಸಿ ವಿವಿಧ ಕೇಂದ್ರ ಸಂಘಟನೆಗಳಿಗೆ ಸೇರಿದ ಕಾರ್ಮಿಕ ಸಂಘಗಳು ಮದ್ರಾಸಿನಲ್ಲಿ ಅಕ್ಟೋಬರ್ 14 ರಂದು ಸಭೆ ಸೇರಿದವು. ಅಣ್ಣಾ ಡಿ. ಎಂ. ಕೆ. ಯ ಕಾರ್ಮಿಕ ಸಂಘ ಮಾತ್ರ ಇದರಲ್ಲಿ ಭಾಗವಹಿಸಲಿಲ್ಲ. ಈ ಸಭೆಯಲ್ಲಿ ಶೇ. 20 ಬೋನಸ್ ಹಾಗೂ 500 ರೂ. ಕೊಡಬೇಕಾಗಿ ಬೇಡಿಕೆ ಮಂಡಿಸಲಾಯಿತು. ಈ ಸಭೆಯ ನಿರ್ಧಾರದಂತೆ ಅಕ್ಟೋಬರ್ 21 ರಂದು ರಾಜ್ಯಾದ್ಯಂತ ಪ್ರದರ್ಶನಗಳು ನಡೆದವು. ಮದ್ರಾಸಿನಲ್ಲಿ ನೂರಾರು ಸಾರಿಗೆ ಕಾರ್ಮಿಕರು 'ಸಾರಿಗೆ ಭವನ'ದೆದುರು ಮತಪ್ರದರ್ಶನ ನಡೆಸಿದರು.

ವಿದ್ಯುತ್ ಮಂಡಳಿಯ ನೌಕರರೂ ಶೇ. 16.33 ಬೋನಸ್ ಬೇಡಿಕೆಗಾಗಿ ರಾಜ್ಯಾದ್ಯಂತ ಬೇಡಿಕೆ ದಿನ ಆಚರಿಸಿದ್ದಾರೆ. ವಿದ್ಯುತ್ ಮಂಡಳಿ ನೌಕರರ ಜಂಟಿ ಕ್ರಿಯಾ ಸಮಿತಿಯಲ್ಲೂ ಅಣ್ಣಾ ಡಿ. ಎಂ. ಕೆ.ಯ ಸಂಘಟನೆ ಭಾಗವಹಿಸಲಿಲ್ಲ. ಭಾಗವಹಿಸದ ಇನ್ನೊಂದು ಸಂಘವೆಂದರೆ ಎ.ಐ.ಟಿ.ಯು.ಸಿ. ನಾಯಕರ ನೇತೃತ್ವದಲ್ಲಿರುವ ಇನ್ನೊಂದು ಸಂಘ.

ಸುಮಾರು 50 ಸಾವಿರ ಬೀಡಿ ಕಾರ್ಮಿಕರು ಸಿ.ಐ.ಟಿ.ಯು. ಹಾಗೂ ಎ. ಐ. ಟಿ. ಯು. ಸಿ. ನೇತೃತ್ವದಲ್ಲಿ ಉತ್ತರ ಅರ್ಕಾಟ್ ಜಿಲ್ಲೆಯಲ್ಲಿ ಒಂದು ದಿನದ ಮುಷ್ಕರ ನಡೆಸಿತ್ತು. ಹೆಚ್ಚಿನ ಬೋನಸ್‌ಗಾಗಿ ಒತ್ತಾಯ ಮಾಡಿದ್ದಾರೆ.

ಇದೇ ರೀತಿ ಇತರ ಕೈಗಾರಿಕೆಗಳಲ್ಲೂ ಬೋನಸ್‌ಗಾಗಿ ಹೋರಾಟ ನಡೆಯುತ್ತಿವೆ. ಕೆಲವೆಡೆ ಕಾರ್ಮಿಕರು ಹೋರಾಟಗಳ ಫಲವಾಗಿ ಈಗಾಗಲೇ ಬೋನಸ್ ಗಳಿಸಿಕೊಂಡಿದ್ದಾರೆ.

○

ಮಂಗಳೂರು :

ಸಹಕಾರಿ ಸಂಘದ ವಿಶೇಷ ಮಹಾಸಭೆ

6-11–82 ರಂದು ಮಗೋಳಿಯ ಕೆನರಾ ವರ್ಕ್ಸ್‌ಷಾಪಿನಲ್ಲಿ ಸಹಕಾರಿ ಸಂಘದ ವಿಶೇಷ ಮಹಾಸಭೆ ನಡೆಯಿತು, ಅಧ್ಯಕ್ಷತೆಯನ್ನು ಸದಾನಂದ ಶ್ರೀಯಾನ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಕೆನರಾ ವರ್ಕ್ಸ್‌ಷಾಪಿನ ವರ್ಕ್ಸ್ ಮ್ಯಾನೇಜರ್ ಶ್ರೀ ಎಮ್.ವಿ. ಕಿಣಿಯವರು ಉಪಸ್ಥಿತರಿದ್ದರು.

ಆರಂಭದಲ್ಲಿ ಸಂಘದ ಕಾರ್ಯದರ್ಶಿ ಕಾಂ। ಸಿ. ನಾರಾಯಣ ಅವರು ಸ್ವಾಗತಿಸಿದರು. ಹಾಗೂ 1980-81, 81-82ರ ವರದಿಯನ್ನು ಸಲ್ಲಿಸಿದರು.

1980–81ರ ಆಡಿಟ್ ರಿಪೋರ್ಟನ್ನು ಪರಿಶೀಲಿಸಿ, ಆ ವರ್ಷದ ಲಾಭಾಂಶದಿಂದ ಶೇ. 9 ರದಲ್ಲಿ ಸದಸ್ಯರ ಪಾಲು ಬಂಡವಾಳಕ್ಕೆ ಡಿವಿಡೆಂಡ್ ಹಂಚಲಾಯಿತು.

ಆನಂದ ಕಂದ

ಖ್ಯಾತ ಸಾಹಿತಿ ಆನಂದ ಕಂದ (ಬೆಟಗೇರಿ ಕೃಷ್ಣಶರ್ಮ)ರು 30-10-82 ರಂದು ತಮ್ಮ 82ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಶರ್ಮರು ಇತ್ತೀಚಿನ ದಿನಗಳಲ್ಲಿ ಅನಾರೋಗ್ಯ ಪೀಡಿತರಾಗಿದ್ದರು. ಕಥೆ, ಕಾದಂಬರಿ, ಕಾವ್ಯ ಮುಂತಾದ ಕ್ಷೇತ್ರಕ್ಕೆ ಬೆಟಗೇರಿ ಕೃಷ್ಣಶರ್ಮರು ಕೊಡುಗೆ ನೀಡಿದ್ದಾರೆ.

ಬೆಟಗೇರಿ ಕೃಷ್ಣಶರ್ಮರ ನಿಧನಕ್ಕೆ ಐಕ್ಯರಂಗವು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ಹಾಗೂ ಅವರ ಕುಟುಂಬದ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ರಾಷ್ಟ್ರೀಯ ಪ್ರಶ್ನೆ: ೮೦ರ ದಶಕದ ಸವಾಲು

ಇತ್ತೀಚೆಗೆ ಭಾರತದಲ್ಲಿ ರಾಷ್ಟ್ರೀಯ ಪ್ರಶ್ನೆಯು ಬಹಳ ತೀವ್ರವಾಗಿದೆ. ಈ ಪ್ರಶ್ನೆಗೆ ಒಂದು ಪ್ರಜಾಸತ್ತಾತ್ಮಕ ಪರಿಹಾರವನ್ನು ಕಂಡುಕೊಳ್ಳದಿರುವಾಗ, ಪ್ರತಿಗಾಮಿ ಶಕ್ತಿಗಳೂ ಸಾಮ್ರಾಜ್ಯಶಾಹಿ ಶಕ್ತಿಗಳೂ ತಮ್ಮದೇ ದುರುದ್ದೇಶ ಪೂರೈಕೆಗಾಗಿ ಯಶಸ್ವಿಯಾಗಿಯೇ ಈ ಪ್ರಶ್ನೆಯನ್ನು ಉಪಯೋಗಿಸುತ್ತಿದ್ದಾರೆ. ಈಶಾನ್ಯ ಭಾರತ, ಖಲಿಸ್ತಾನ್, ಜಾರ್ಖಂಡ ಮತ್ತಿತರ ಅಂತಹದೇ ತರದ ಪ್ರತ್ಯೇಕತಾವಾದಿ ರಾಷ್ಟ್ರೀಯ ಪ್ರಕ್ಷೋಭೆಗಳು ಮತ್ತು ಗಿರಿಜನರ ಚಳುವಳಿಗಳು ತೀವ್ರಗೊಳ್ಳುತ್ತಿರುವುದು ಇದಕ್ಕೆ ಸಾಕ್ಷಿ.

ಭಾರತದ ಬಹುರಾಷ್ಟ್ರೀಯ ಕಾರ್ಮಿಕ ವರ್ಗವನ್ನು ಹೊಡೆದಾಡುತ್ತಿರುವ ವಿಭಿನ್ನ ಶಿಬಿರಗಳಲ್ಲಿ ಹಂಚಿಹೋಗುವಂತೆ ವಿಭಜಿಸುವುದೇ ಮತ್ತು ರಾಷ್ಟ್ರೀಯ ಸಮಗ್ರತೆಯು ಬೇರನ್ನೇ ಪ್ರತ್ಯೇಕಿಸುವ ಮೂಲಕ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಮತ್ತು ಹೋರಾಟಗಳನ್ನು ಮುರಿಯುವುದೆ ಈ ಪ್ರಕ್ಷೋಭೆಗಳ ಮುಖ್ಯ ಉದ್ದೇಶಗಳಾಗಿವೆ.

ಈ ಚಳುವಳಿಗಳು ಖಂಡಿತವಾಗಿ ಕಾರ್ಮಿಕ ವರ್ಗಕ್ಕೆ ಹಾನಿಯನ್ನುಂಟುಮಾಡಿವೆ ಮತ್ತು ಎಲ್ಲಾ ವಿಧಗಳಲ್ಲಿ ಶೋಷಕ ವರ್ಗಗಳಿಗೆ ಸಹಾಯ ಮಾಡಿವೆ. ಅಸ್ಸಾಮಿನಲ್ಲಿ ವಿದೇಶಿ-ವಿರೋಧಿ ಪ್ರಕ್ಷೋಭೆಯಲ್ಲಿ, ಮರ ಮತ್ತು ಬಿದಿರುಗಳ ರಫ್ತನ್ನು ತಡೆಹಿಡಿದುದರಿಂದಾಗಿ ಸುಮಾರು ಒಂದು ಲಕ್ಷ ಕಾರ್ಮಿಕರನ್ನು ಒಂದು ವರ್ಷ ಕಾಲ ನಿರುದ್ಯೋಗಕ್ಕೆ ತಳ್ಳಲಾಗಿತ್ತು. ಇವರ ಪೈಕಿ 22,000 ಮಂದಿ ಪ್ಲೈವುಡ್ ಮತ್ತು ವೀನಿಯರ್ ಮಿಲ್ ಕಾರ್ಮಿಕರಾಗಿದ್ದರು ಅದು ದುಡಿಯುವ ಇತರ ವಿಭಾಗಗಳವರನ್ನೂ, ಇಡೀ ಜನತೆಯನ್ನು ಹಾಸಿಗೊಳಪಡಿಸಿತು. ಒಂದು ವರ್ಷದಲ್ಲಿ ಸಣಬು ಬೆಳೆಗಾರರು ಐವತ್ತು ಕೋಟಿ ರೂಪಾಯಿಯಷ್ಟು ನಷ್ಟ ಹೊಂದಿದರು, ಸರಕಾರಿ ಏಜೆನ್ಸಿಗಳು ಕೊಟ್ಟ ಹೇಳಿಕೆಯ ಪ್ರಕಾರವೇ ಸರಕಾರೀ ಕ್ಷೇತ್ರದ ಕೈಗಾರಿಕೆಗಳಲ್ಲಿ, ಎಣ್ಣೆ ಮತ್ತು ಗೊಬ್ಬರ ಕೈಗಾರಿಕೆಗಳಲ್ಲಿ, ರೂ. 12.72 ಕೋಟಿ ನಷ್ಟವೂ, ರೈಲ್ವೆಗಳಲ್ಲಿ ರೂ. 30 ಕೋಟಿ ನಷ್ಟವೂ ಸಂಭವಿಸಿತು. ಗ್ರಾಮಗಳನ್ನು ಸುಟ್ಟು ಹಾಕಿ, ಸಹಸ್ರಾರು ಮಂದಿಯನ್ನು ತಮ್ಮ ಮನೆಗಳಿಂದ ಕಿತ್ತೆಸೆಯಲ್ಪಟ್ಟವರಿಗಾದ ಹಾನಿಯನ್ನು ಯಾರೂ ಅಂದಾಜು ಮಾಡದಿರುವುದರಿಂದ ಎಷ್ಟೆಂದು ಹೇಳಲು ಸಾಧ್ಯವಾಗುತ್ತಿಲ್ಲ.

ಅಲ್ಲದೆ, ಅಸ್ಸಾಂನಲ್ಲಿ ಹಲವಾರು ಕಾರ್ಮಿಕರ ಮತ್ತು ನೌಕರರ ಸಂಘಟನೆಗಳು ಮುರಿಯಲ್ಪಟ್ಟಿವೆ ಮತ್ತು ಪ್ರಕ್ಷೋಭೆಯ ಹೆಸರಿನಲ್ಲಿ ಈ ಸಂಘಟನೆಗಳ ಅಖಿಲ ಭಾರತೀಯ ಸಂಪರ್ಕಗಳು ಕಡಿದು ಹಾಕಲ್ಪಟ್ಟಿವೆ.

ಈ ಪರಿಸ್ಥಿತಿಯಲ್ಲಿ, ರಾಷ್ಟ್ರೀಯ ಸಮಗ್ರತೆ, ಕಾರ್ಮಿಕ ವರ್ಗದ ಮತ್ತು ಪ್ರಜಾಸತ್ತಾತ್ಮಕ ಮುನ್ನಡೆಯ ಐಕ್ಯತೆಯ ಆಧಾರದಲ್ಲಿ, ಕಾರ್ಮಿಕ ವರ್ಗವು ಭಾರತದಲ್ಲಿ ರಾಷ್ಟ್ರೀಯ ಪ್ರಶ್ನೆಯನ್ನು ಬಗೆಹರಿಸುವ ಹೋರಾಟದಲ್ಲಿ ಮುಂದಾಳುತ್ವವನ್ನು ವಹಿಸುವುದು ಅನಿವಾರ್ಯವಾಗಿದೆ.

ವಿಭಜನಾ ಶಕ್ತಿಗಳ ಹಿಂದಿರುವ ಸಾಮ್ರಾಜ್ಯಶಾಹಿಗಳು

ಈ ಅತಿ-ರಾಷ್ಟ್ರೀಯ ಪ್ರಕ್ಷೋಭೆ ಮತ್ತು ಪ್ರತ್ಯೇಕತಾ ಗಿರಿಜನರ ಚಳುವಳಿಗಳ ಒಳಗೆ ಸಾಮ್ರಾಜ್ಯಶಾಹಿಗಳ ಏಜೆನ್ಸಿಗಳು ನುಸುಳಿಕೊಂಡಿವೆ ಎಂದು ಇತ್ತೀಚಿನ ಅನುಭವಗಳು ಸೂಚಿಸುತ್ತವೆ. ರಾಷ್ಟ್ರೀಯ ಅತಿವಾದವಾದ ಎಲ್ಲಾ ಸಂದರ್ಭಗಳಲ್ಲೂ, ಅದರಿಂದುಂಟಾದ ಎಲ್ಲಾ ತಿಕ್ಕಾಟಗಳಲ್ಲೂ ಅವರು ಸಕ್ರಿಯರಾಗಿದ್ದಾರೆ. ಭಾರತದ ಪೂರ್ವ ಗಡಿಗಳಲ್ಲಿರುವ ಪರ್ವತಮಯ ರಾಜ್ಯಗಳಲ್ಲಿ 50ರ ದಶಕಗಳಿಂದಲೂ ಈ ಏಜೆನ್ಸಿಗಳು ಸಕ್ರಿಯವಾಗಿ ಕೆಲಸ ಮಾಡುತ್ತ ಬಂದಿವೆ. ಆ ಪ್ರಯೋಗಾತ್ಮಕ ಕೇಂದ್ರದಿಂದ ಅವರು ಪ್ರತ್ಯೇಕತಾ ಅಭಿಪ್ರಾಯಗಳ ವಿಷವನ್ನು ಬೇರೆಡೆಗಳಿಗೆ ಹರಡಿದರು. ಪುನಃ 1947ರ ವಿಶ್ವಾಸ ಮಾತುಕತೆಯ ನಂತರ ಇದೀಗ ಪುನಃ ಭಾರತವನ್ನು ತುಂಡರಿಸುವುದಕ್ಕೆ ಹೊರಟಿದ್ದಾರೆ. ಮತೀಯ ಹುಚ್ಚು ಭಾವವನ್ನು ಪುನಃ ಉಪಯೋಗಿಸಲಾಗುತ್ತಿದೆ; ಆದರೆ ಈ ಸಲ ಅವರ ಮುಖ್ಯ ಅಸ್ತ್ರಗಳು : ಅತಿ ರಾಷ್ಟ್ರೀಯತೆ ಮತ್ತು ಸಮರಸಿದ್ಧ ಗಿರಿಜನರ ಪ್ರತ್ಯೇಕತಾವಾದ.

ಈ ವೈರಿಯನ್ನು ಸೋಲಿಸದ ವಿನಹ ಈ ಪ್ರಶ್ನೆಯನ್ನು ಕಡೆಗಣಿಸಿ ಬದಿಗಿಡುವುದರಿಂದ, ರಾಷ್ಟ್ರೀಯ ಸಮಸ್ಯೆಗೆ ಒಂದು ಪ್ರಜಾಸತ್ತಾತ್ಮಕವಾದ ಪರಿಹಾರವನ್ನು ಕಂಡುಕೊಳ್ಳುವ ಹೋರಾಟದಲ್ಲಿ ಕಾರ್ಮಿಕ ವರ್ಗಕ್ಕೆ ನೇತೃತ್ವ ಪಾತ್ರವಹಿಸಲು ಅಸಾಧ್ಯವೆಂಬುದು ಸ್ಪಷ್ಟ.

ಸಾಮ್ರಾಜ್ಯಶಾಹಿಗಳ ವಿರುದ್ಧದ ಹೋರಾಟವನ್ನು ಸೈದ್ಧಾಂತಿಕ ಕ್ಷೇತ್ರಗಳಿಗೂ ಹರಡುವುದು ಅವಶ್ಯಕವಾಗಿದೆ. ಆರ್ಥಿಕ ಮತ್ತು ರಾಜಕೀಯ ಹೋರಾಟಗಳು ಪ್ರಕೃತದ ಬೇಡಿಕೆಯನ್ನು ಪೂರೈಸಲು ಅಸಮರ್ಥವಾಗಿವೆ. ನಿರಂತರವಾಗಿಯೂ, ಅತ್ಯುಗ್ರವಾಗಿಯೂ ಸಾಮ್ರಾಜ್ಯಶಾಹಿಗಳೂ, ಅವರ ಏಜೆನ್ಸಿಗಳೂ ಮತ್ತು ವಕ್ತಾರರೂ ನಡೆಸುತ್ತಿರುವ ಪ್ರಚಾರ ಮತ್ತು ಅವರು ಪ್ರಚಾರಗೊಳಿಸುತ್ತಿರುವ ರಾಜಕೀಯ, ಸಾಮಾಜಿಕ ಸಿದ್ಧಾಂತಗಳೂ, ಅಭಿಪ್ರಾಯಗಳೂ, ಕಾರ್ಮಿಕ ವರ್ಗವನ್ನೂ, ಇತರರನ್ನೂ ಭಾರತದಲ್ಲಿ ತಟ್ಟಲಾರದು ಎಂದು ಹೇಳುವುದು ತೀರಾ ತಪ್ಪು ಕಲ್ಪನೆ. ಈಗಿನ ಘಟನೆಗಳು ಈ ಹೇಳಿಕೆ ಎಷ್ಟು ಸತ್ಯವೆಂಬುದಕ್ಕೆ ಸಮರ್ಥನೆ.

1947ರಲ್ಲಿ ನಡೆದ ದೇಶದ ವಿಭಜನೆಯಲ್ಲಿ ಕೆಲವು ಒಳ್ಳೆಯ ಅಂಶಗಳಿವೆ ಎಂದು ಅಸ್ಸಾಂನಲ್ಲಿ ಮಧ್ಯಮ ವರ್ಗದ ಒಂದು ವಿಭಾಗದ ಬುದ್ಧಿಜೀವಿಗಳೂ ರಾಜಕಾರಣಿಗಳೂ ಅಭಿಪ್ರಾಯಪಟ್ಟು ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಿದರು. (ಆ ಮೂಲಕ ಅಸ್ಸಾಂನಿಂದ ಬಂಗಾಳಿ ಮಾತಾಡುವ ಜನರಿಂದ ನಿಬಿಡವಾದ ಒಂದು ದೊಡ್ಡ ಜಿಲ್ಲೆಯು ಪ್ರತ್ಯೇಕವಾದ ವಸ್ತುಸ್ಥಿತಿಯಿಂದ ಅವರು ಪ್ರಭಾವಿತರಾದಂತಿದೆ.) ಸಂಕುಚಿತ ರಾಷ್ಟ್ರೀಯತೆಯಿಂದ ಹುಚ್ಚೆದ್ದು, ಅವರಿಗೆ ಕಾಡು ಕಾಣಲಿಲ್ಲ, ಕೇವಲ ಮರಗಳೇ ಕಂಡವು; ಬ್ರಿಟಿಷ್ ಸಾಮ್ರಾಜ್ಯಶಾಹಿ ಪಿತೂರಿಗಾರರ ಒಂದು ದೊಡ್ಡ ಪಿತೂರಿಯನ್ನು ಅವರು ಕಾಣದಾದರು. ಇತ್ತೀಚಿಗಿನ ಕಾಲದಲ್ಲಿ ಈ ಭಾವನೆಯ ದುರುಪಯೋಗ ಪಡೆದು ಒಳ ನುಸುಳಿ, ಸಾಮ್ರಾಜ್ಯಶಾಹಿ ವಿಧ್ವಂಸಕರು ಪಿತೂರಿಯ ಜಾಲವನ್ನೇ ಈಶಾನ್ಯ ಭಾರತದಲ್ಲಿ ಹರಡಿರುವರು. ಆರ್ಥಿಕ ಹಿಂದುಳಿಕೆಯನ್ನು ನಿರ್ಮೂಲನ ಮಾಡಲು ಮತ್ತು ಪ್ರಾದೇಶಿಕ ಮೂಲಸಂಪತ್ತನ್ನು ಉಪಯೋಗಿಸಿ ಜನಸಾಮಾನ್ಯರ ಜೀವನ ಮಟ್ಟವನ್ನು ಮೇಲಕ್ಕೆತ್ತಲು ಆಳುವ ಪಕ್ಷವು ವಿಫಲವಾಗಿರುವುದನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡು ಸಾಮ್ರಾಜ್ಯಶಾಹಿ ಏಜೆನ್ಸಿಗಳು ಭಾರತದಿಂದ ಪ್ರತ್ಯೇಕವಾಗಬೇಕು ಅಸ್ಸಾಂ ಎಂಬ ಪ್ರವೃತ್ತಿಯನ್ನು ಬಲಗೊಳಿಸಿವೆ. ಅವರ ಈ ಪ್ರಚಾರದಿಂದ ಭ್ರಮೆಗೊಂಡು ಅಸ್ಸಾಂನಲ್ಲಿ ಹಲವರು ಪ್ರಕ್ಷೋಭೆಯ ಕಾಲದಲ್ಲಿ "ಸಾಮ್ರಾಜ್ಯಶಾಹಿ ಮೂಲಗಳಿಂದ ರಾಜ್ಯದ ಮೂಲ ಸಂಪತ್ತನ್ನು ಬೆಳೆಸಿಕೊಳ್ಳಲು 'ಪ್ರಾಮಾಣಿಕ' ಸಹಾಯ ದೊರೆಯುವುದೆಂದು" ನಂಬಿದ್ದರು.

1947ರಲ್ಲಿ ದೇಶದ ಮೇಲೆ ವಿಭಜನೆಯನ್ನು ಹೇರುವ ಮೂಲಕ ಬ್ರಿಟಿಷರು ಹೊಸದಾಗಿ ಸ್ವತಂತ್ರಗೊಂಡ ಉಪಖಂಡದ ರಾಷ್ಟ್ರಗಳಿಗೆ ಕ್ಲಿಷ್ಟ ಸಮಸ್ಯೆಗಳ ಒಂದು ಪಂಜರವನ್ನೇ ಬಿಟ್ಟು ಹೋಗಿರುವರು. ಮತೀಯ ಹುಚ್ಚಾಟದ ಅತ್ಯಧಿಕ ಬೆಳವಣಿಗೆ, ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ, ಮನೆಮಾರು ಕಳಕೊಂಡ ದಿಕ್ಕುದೆಸೆಯಿಲ್ಲದ ಮಿಲಿಯಾಂತರ ನಿರಾಶ್ರಿತರ ಆಗಮನ ಮತ್ತು ಅವರಿಗೆ ಪುನರ್ವಸತಿ ಕಂಡುಕೊಳ್ಳುವ ಕ್ಲಿಷ್ಟ ಕಾರ್ಯ, ಮತ್ತು ಭಾರತ-ಪಾಕಿಸ್ತಾನಗಳ ನಡುವಿನ ಬಳಗುದಿ ತಿಕ್ಕಾಟ—ಇವೆಲ್ಲಾ ವಿಭಜನೆಯ ವಿಷಪೂರಿತ ಫಲಗಳು. ಇತ್ತೀಚೆಗೆ ಪೂರ್ವ ಭಾರತದ ಗಂಡಾಂತರ ಆಂತರಿಕ ತಿಕ್ಕಾಟಗಳಿಗೆ ಕಾರಣವಾಗಿ ಈ ಎಲ್ಲಾ ಸಮಸ್ಯೆಗಳು ಮರುಕಳಿಸಿವೆ, ಹಾಗೂ ಬಹುರಾಷ್ಟ್ರೀಯ ಭಾರತದ ಸಮಗ್ರತೆಯ ಹೃದಯಕ್ಕೇನೇ ಪೆಟ್ಟುಹಾಕಿವೆ. ಆಶ್ಚರ್ಯವೇನೆಂದರೆ, ವಿಭಜನೆಯ ಬೆನ್ನಲ್ಲಿ ಎದ್ದು ಬಂದ ಸಮಸ್ಯೆಗಳಿಗೆ ಸಾಮ್ರಾಜ್ಯಶಾಹಿಗಳನ್ನು ಜವಾಬ್ದಾರರಾಗಿ ಪ್ರಕ್ಷೋಭೆಕಾರರೂ, ಮೇಲೆ ಹೇಳಿದ ಬುದ್ಧಿಜೀವಿಗಳು ಪರಿಗಣಿಸಲಿಲ್ಲ. ಬದಲು, ತಮ್ಮ ತಾಯ್ನಾಡಿನಲ್ಲೇ 'ವಿದೇಶಿ'ಯರಾಗಿ, ತಮ್ಮದೇ ತಾಯ್ನಾಡಿನಲ್ಲಿ ಆಶ್ರಯ ಪಡೆಯಲು ವಿಧಿಯಿಂದ ನಿರ್ಬಂಧಿಸಲ್ಪಟ್ಟ ದಬ್ಬಾಳಿಕೆಗೊಳಗಾದ ಮನೆಮಾರು ಕಳಕೊಂಡ ನಿರಾಶ್ರಿತರ ಮೇಲೆಯೇ ಅವರು ತಪ್ಪು ಹೊರಿಸಿದರು.

ಭಾರತದ ವಿಭಜನೆಯಾಗಿ 35 ವರ್ಷಗಳ ನಂತರವೂ ಅಂತಹ ಮತ್ತು ಅದೇ ರೀತಿಯ ಅಭಿಪ್ರಾಯಗಳು ವಿಸ್ತೃತ ಪ್ರಭಾವ ಬೀರುತ್ತಿರುವುದು ನಿಜಕ್ಕೂ ಗಂಭೀರವಾಗಿವೆ.

ಅಸ್ಸಾಂ ಪ್ರಕ್ಷೋಭೆಯ ಎಲ್ಲಾ ಆಯಾಮಗಳನ್ನು ಕಂಡನಂತರ ಕೂಡ, ಈ ಪ್ರಕ್ಷೋಭೆಗೆ ಬಹಿರಂಗವಾಗಿ ಬಿ. ಜೆ. ಪಿ.— ಆರ್. ಎಸ್. ಎಸ್. ಮತ್ತು ಜನತಾ ದಳಗಳ ವಿಭಾಗಗಳನ್ನೊಳಗೊಂಡ ಪಕ್ಷಗಳು ಬೆಂಬಲವೀಯುತ್ತಿರುವುದನ್ನು ಯಾರೊಬ್ಬರೂ ಪರಿಗಣಿಸದಿರಲು ಸಾಧ್ಯವಿಲ್ಲ. ಭಾರತದಲ್ಲಿ ಪಿತೂರಿ ನಡೆಸಿದ ಅಪಾದನೆಯಿಂದ ಸಾಮ್ರಾಜ್ಯಶಾಹಿಗಳನ್ನು ವಿಮುಕ್ತಗೊಳಿಸುವುದಕ್ಕೆ ಸಾಕ್ಷಿಗಳಾಗಿ ವರ್ತಿಸುತ್ತಿರುವ ಪಕ್ಷಗಳೂ, ಗುಂಪುಗಳೂ ಇವೇ ಆಗಿವೆ.

ಇತ್ತೀಚಿಗಿನ ಕಾಂಗ್ರೆಸ್ಸು ಮಾದರಿ ಸರಕಾರವು 'ಅಮೇರಿಕನ್ ಮಾದರಿ'ಯನ್ನೇ ರಾಜಕೀಯ-ಆರ್ಥಿಕ ವಿಷಯಗಳಲ್ಲಿ ಮಾತ್ರವಲ್ಲ, ವಿದ್ಯಾಭ್ಯಾಸ, ಕೃಷಿ, ಕೈಗಾರಿಕೆ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಅನುಕರಿಸುತ್ತಾ ಬಂದಿದೆ. ಭಾರತದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿ ಏಜೆನ್ಸಿಗಳು ಯುನಿವರ್ಸಿಟಿ ವಲಯಗಳಲ್ಲಿಯೂ, ಪತ್ರಿಕೋದ್ಯಮದಲ್ಲಿಯೂ, ಪ್ರಚಾರದ ವ್ಯಾಪಾರದಲ್ಲೂ ಯಾವುದೇ ಅಡೆತಡೆಗಳಿಲ್ಲದೆ ಒಳನುಸುಳಿಕೊಂಡಿವೆ. ಅವರು ಮುಕ್ತವಾಗಿ ಹಣವನ್ನು ಸುರಿಯುತ್ತಿದ್ದಾರೆ, ಒಂದು ಬಡ ದೇಶದಲ್ಲಿ ಹಣದ ಶಕ್ತಿಯು ಒಂದು ದೊಡ್ಡ ಶಕ್ತಿಯಾಗಿದೆ. ಫಲಿತಾಂಶವಾಗಿ, ಭಾರತದಲ್ಲಿ ಅಮೇರಿಕದ ತತ್ವಗಳು, ಅಭಿಪ್ರಾಯಗಳು, ಸಿದ್ಧಾಂತಗಳು ಮತ್ತು ಜೀವನ ವಿಧಾನಗಳು ಅಸ್ತಿತ್ವಕ್ಕೆ ಬಂದು ಒಂದು 'ಸಾಮಾಜಿಕ ತಳಹದಿ' ಏರ್ಪಟ್ಟಿದೆ. ಅವರು ಬಹುರಾಷ್ಟ್ರೀಯ ಕಾರ್ಪೊರೇಶನ್‌ಗಳ ಕೌಶಲ್ಯದ ಮೂಲಕ ಈ ತಳಹದಿಯನ್ನು ಇನ್ನೂ ಅಧಿಕವಾಗಿ ದೃಢಪಡಿಸುತ್ತಿದ್ದಾರೆ. ಈ ಸಾಮಾಜಿಕ ತಳಹದಿಯು ಸ್ವಭಾವತಃ ಕಾರ್ಮಿಕ ವರ್ಗದ ಕಡು ವೈರಿಯಾಗಿದೆ.

—ಅಚಿಂತ್ಯ ಭಟ್ಟಾಚಾರ್ಯ

ಅದ ಕಾರಣವೇ, ಈ ದಿನ ಭಾರತದ ಜನತೆಗಳ ಐಕ್ಯತೆಗಾಗಿ, ರಾಷ್ಟ್ರೀಯ ಸಮಗ್ರತೆಗಾಗಿ ಮತ್ತು ಕಾರ್ಮಿಕ ವರ್ಗದ ಐಕ್ಯತೆಗಾಗಿ ನಡೆಸಲ್ಪಡುವ ಯಾವುದೇ ಹೋರಾಟಗಳು ಸರ್ವಾಧಿಕಾರಿ ಶಕ್ತಿಗಳ ಮತ್ತು ವಿಭಜನೆ ಶಕ್ತಿಗಳ ವಿರುದ್ಧ ನಡೆಸಲ್ಪಡುವ ಹೋರಾಟಗಳನ್ನು ಸಾಮ್ರಾಜ್ಯಶಾಹಿ ವಿರೋಧದೊಡನೆ ಜೋಡಿಸದ ವಿನಹ ಹೋರಾಟ ನಡೆಸುವುದು ಅಸಾಧ್ಯವಾಗಿದೆ.

ಕಾರ್ಮಿಕ ವರ್ಗದಲ್ಲಿ ಈ ಜಾಗ್ರತೆಯನ್ನು ಅತ್ಯಂತ ಹರಿತಗೊಳಿಸಬೇಕು.

ಕಾರ್ಮಿಕ ವರ್ಗದ ಚಳುವಳಿಯಲ್ಲಿ, ಪುರೋಗಾಮಿ ಅಂಶಗಳು ಕೂಡ ರಾಷ್ಟ್ರೀಯ ಅತಿವಾದದ ಅಪಾಯದ ಕುರಿತು ಸಂಪೂರ್ಣವಾಗಿ ಅರಿವುಳ್ಳವರಾಗಿರುವುದಿಲ್ಲ. ಒಂದು ತರದ ಮೇಲ್ಮೇಲಿನ ಐಕ್ಯತೆಯ ಗಂಟಿನಲ್ಲಿ ವಿವಿಧ ಜನಾಂಗೀಯ ವಿಭಾಗಗಳಿಗೆ ಸೇರಿದ ಕಾರ್ಮಿಕರನ್ನು, ವಿಭಜನಾ ಶಕ್ತಿಗಳ ವಿರುದ್ಧ ಹೋರಾಟವನ್ನು ಬದಿಗಿರಿಸಿ ಕೂಡ ಜತೆಗೂಡಿಸಿಕೊಂಡಿರಬಹುದೆಂದು ನಮ್ಮಲ್ಲಿ ಕೆಲವರು ಆಲೋಚನೆ ಮಾಡುವಂತಿದೆ. ಅಂತಹ ಅಭಿಪ್ರಾಯವು ಅವಾಸ್ತವಿಕವಾಗಿದೆ. ಸ್ಪಷ್ಟ ಜಾಗ್ರತೆಯೇ ಕಾರ್ಮಿಕ ವರ್ಗದ ಐಕ್ಯತೆಯ ತಳಹದಿಯಾಗಿದೆ ಎಂಬುದನ್ನು ಈ ಅಭಿಪ್ರಾಯವು ಹೊರತಳ್ಳುವಂತಾಗುತ್ತದೆ.

(ಮುಂದಿನ ಸಂಚಿಕೆ ನೋಡಿ)

ಕಾಂ|ಮುಕುಂದ್‌ಮಂಡಲ್

(3ನೇ ಪುಟದಿಂದ)

1971ರಲ್ಲಿ ಪ. ಬಂಗಾಲ ವಿಧಾನ ಸಭೆಗೆ ಕಾಂ| ಮಂಡಲ್ ಆಯ್ಕೆಯಾಗಿದ್ದರು. 1977 ಮತ್ತು 1980ರ ಲೋಕಸಭಾ ಚುನಾವಣೆಗಳಲ್ಲಿ ಕಾಂ| ಮಂಡಲ್ ಚುನಾಯಿತರಾಗಿದ್ದರು. ಅವರು ಹರಿಜನ-ಗಿರಿಜನ ಅಭಿವೃದ್ಧಿ ಸಮಿತಿಯ ಸದಸ್ಯರಾಗಿದ್ದರು.

ದೆಹಲಿಯಲ್ಲಿ ಸ್ಪೀಕರ್ ಬಲರಾಮ್ ಜಾಖಡ್ ಅವರನ್ನೊಳಗೊಂಡು ಎಲ್ಲ ಪಕ್ಷಗಳ ಧುರೀಣರು ಪಕ್ಷದ ಕೇಂದ್ರ ಸಮಿತಿಯ ಕಚೇರಿಗೆ ತೆರಳಿ ತಮ್ಮ ಸಂತಾಪ ವ್ಯಕ್ತಪಡಿಸಿದರು.

ಮಥುರಾಪುರದಲ್ಲಿ ಅಂತ್ಯ ಸಂಸ್ಕಾರ ನಡೆಯಿತು. ಕಾಂ| ಮಂಡಲ್ ಪತ್ನಿ ಶಬೆರಾಣಿ ಹಾಗೂ ಐವರು ಮಕ್ಕಳನ್ನು ಅಗಲಿದ್ದಾರೆ.

ಸಿ ಪಿ. ಐ. (ಎಂ) ಕೇಂದ್ರ ಸಮಿತಿಯು ಕಾಂ| ಮಂಡಲ್ ಅವರ ನಿಧನಕ್ಕೆ ತೀವ್ರ ದುಃಖ ವ್ಯಕ್ತಪಡಿಸಿದೆ.

ರೈತ ಸಂಘದ ಚಟುವಟಿಕೆಗಳು

ದೊಡ್ಡಬಳ್ಳಾಪುರ : ಧರಣಿ ಸತ್ಯಾಗ್ರಹ

ಬರಗಾಲ ಪರಿಹಾರ ಕಾರ್ಯವನ್ನು ಎಲ್ಲ ಹಳ್ಳಿಗಳಿಗೂ ವಿಸ್ತರಿಸಬೇಕು ; ಕಂದಾಯ, ನೀರು ತೆರಿಗೆ ರದ್ದಾಗಬೇಕು ; ಅಗತ್ಯ ವಸ್ತುಗಳನ್ನು ಕಾರ್ಡ್‌ಗಳ ಮೂಲಕ ವಿತರಣೆಯಾಗಬೇಕು : ಕೃಷಿ ಕೂಲಿಗಾರರಿಗೆ ಕೂಲಿ ಹೆಚ್ಚಳವಾಗಬೇಕು... ಇತ್ಯಾದಿ 12 ಬೇಡಿಕೆಗಳನ್ನು ಮುಂದಿಟ್ಟು 2-11-82 ರಂದು ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರು ತಾಲ್ಲೂಕು ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಆರಂಭದಲ್ಲಿ ಸುಮಾರು 250 ಜನ ರೈತರು ಪುರಭವನದಿಂದ ಮೆರವಣಿಗೆ ಹೊರಟಿದ್ದರು. ಧರಣಿ ಸತ್ಯಾಗ್ರಹದ ನಂತರ ರೈತರನ್ನುದ್ದೇಶಿಸಿ ನಿವೃತ್ತ ಅಸಿಸ್ಟೆಂಟ್ ಕಮೀಷನರ್ ಶ್ರೀ ವೆಂಕಟರಾಮಯ್ಯ, ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಕಾಂ|| ಮುಗುವಾಳಪ್ಪ, ಕಾಂ| ಲಕ್ಕಣ್ಣ, ಸಿ. ಪಿ. ಐ. ನ ಕಾಂ| ರಾಮಾಂಜನಪ್ಪ ಮತ್ತಿತರರು ಮಾತನಾಡಿದರು. ಕಾಂ|| ಸಿ. ರಾಮಭದ್ರಯ್ಯ ಕಾಂ|| ಬಾಲಾಜಿ ಮತ್ತಿತರರ ನೇತೃತ್ವದ ನಿಯೋಗವು ಮನವಿ ಸಲ್ಲಿಸಿತು.

ದೇಶನೂರು : ನೂತನ ಘಟಕ ಆರಂಭ

30-10-82 ರಂದು ಬೈಲಹೊಂಗಲ ತಾಲ್ಲೂಕಿನ ದೇಶನೂರು ಗ್ರಾಮದಲ್ಲಿ ರೈತ ಸಂಘದ ನೂತನ ಘಟಕ ಆರಂಭವಾಯಿತು. ನಿತ್ಯಾನಂದಸ್ವಾಮೀಜೀ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾಂ|| ಎಚ್. ಎಸ್. ಕಪ್ಪಣ್ಣವರ ಅಧ್ಯಕ್ಷತೆ ವಹಿಸಿದ್ದರು. ನೂತನ ಘಟಕದ ಅಧ್ಯಕ್ಷರಾಗಿ ಯಲ್ಲಪ್ಪ ಬಿ. ಕೇದಾರಿ, ಉಪಾಧ್ಯಕ್ಷರಾಗಿ ಬಸವಣ್ಣಪ್ಪ ಕಮತಗಿ ಹಾಗೂ ಕಾರ್ಯದರ್ಶಿಯಾಗಿ ಮಳಗೌಡ ಪಾಟೀಲ ಇವರುಗಳು ಚುನಾಯಿತರಾಗಿದ್ದಾರೆ.

ಬೈಲಹೊಂಗಲ : ತಿಗಡಿ-ಹರಿನಾಳ ಯೋಜನೆಗಾಗಿ ಒತ್ತಾಯ

ವಿರೇಂದ್ರ ಪಾಟೀಲರ ಸರಕಾರ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ, ನಂತರ ಕೆಲವು ವಿಶಿಷ್ಟ ಹಿತಾಸಕ್ತಿಗಳ ಹಣದ ಪ್ರಭಾವಕ್ಕೆ ಮಣಿದು ಕೈಬಿಟ್ಟಿರುವ ಬೈಲಹೊಂಗಲ ತಾಲ್ಲೂಕಿನ ತಿಗಡಿ ಗ್ರಾಮದ ಹದ್ದಿನಲ್ಲಿ ಹರಿನಾಳ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ರೈತ ಸಂಘದ ಜಿಲ್ಲಾ ಸಮಿತಿಯ ಕಾರ್ಯದರ್ಶಿ ನಿತ್ಯಾನಂದ ಸ್ವಾಮೀಜಿ ಒತ್ತಾಯಿಸಿದ್ದಾರೆ. ಅವರು ಕಲ್ಲೂರುಗ್ರಾಮದಲ್ಲಿ ರೈತರ ಸಂಘದ ಘಟಕವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಬೈಲಹೊಂಗಲ ತಾಲ್ಲೂಕಿನ ತಿಗಡಿ, ಕಲ್ಲೂರು, ಪಟ್ಟಾಳ, ನಾಗಲಾಪುರ, ಎಂ.ಕೆ. ಹುಬ್ಬಳಿ, ಹೊಳಿ ಹೊಸೂರು, ನೇಗಿನಹಾಳ, ಸಂಪಗಾಂವ, ಸಾಣಿಕೊಪ್ಪ, ಯಡಾಲ, ನಾಗನೂರು, ಭಾವಿಹಾಳ, ಮರಗೊಪ್ಪ...ಮುಂತಾದ ಗ್ರಾಮಗಳ ಸಾವಿರಾರು ಎಕರೆ ಜಮೀನಿಗೆ ನೀರಿನ ಸೌಕರ್ಯ ಒದಗಿಸಬಹುದಾಗಿದ್ದ ಯೋಜನೆಯನ್ನು ಪ್ರಭಾವಕ್ಕೆ ಮಣಿದು ಸರಕಾರ ಮೂಲೆಗೊತ್ತಿದೆ ಎಂದು ಸ್ವಾಮೀಜಿ ಆಪಾದಿಸಿದರು.

ಇತ್ತೀಚಿಗೆ ಬೆಳಗಾವಿಯಲ್ಲಿ ಮುಖ್ಯ ಮಂತ್ರಿಗಳು ಚಿಕ್ಕನಿರಾವರಿಯೋಜನೆಗಳ ಬಗ್ಗೆ ನೀಡಿದಆಶ್ವಾಸನೆಯ ಹಿನ್ನೆಲೆಯಲ್ಲಿ ಬೈಲಹೊಂಗಲ ತಾಲ್ಲೂಕಿನ ರೈತರು ಪ್ರಾಂತ ರೈತ ಸಂಘದ ಆಶ್ರಯದಲ್ಲಿ ತಮ್ಮ ಈ ಪ್ರಮುಖ ಬೇಡಿಕೆಗಾಗಿ ಹೋರಾಟಕ್ಕಿಳಿಯುವ ಲಕ್ಷಣಗಳು ಕಂಡು ಬರುತ್ತಿವೆ.

ರಾಯಚೂರು : ತುಂಗಭದ್ರಾ ಎಡದಂಡೆ ಕಾಲುವೆ ರೈತರ ಸಮಾವೇಶ

ಪ್ರಾಂತ ರೈತಸಂಘದ ರಾಯಚೂರು ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ತುಂಗಭದ್ರಾ ಎಡದಂಡೆ ಕಾಲುವೆ ರೈತರ ಸಮಾವೇಶವು 25-10-82 ರಂದು ಯಶಸ್ವಿಯಾಗಿ ನಡೆಯಿತು. ಮಾಜೀ ಶಾಸಕ ಎಂ. ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು.

23 ಹಳ್ಳಿಗಳನ್ನು ಪ್ರತಿನಿಧಿಸಿ 300 ಜನ ರೈತ ಪ್ರತಿನಿಧಿಗಳು ಸಮಾವೇಶಕ್ಕೆ ಹಾಜರಿದ್ದರು. ಆರಂಭದಲ್ಲಿ ಬಿ. ಎಸ್. ಪಾಟೀಲ ಸ್ವಾಗತಿಸಿದರು. ಕಾಂ| ಚಂದ್ರಶೇಖರ ಬಾಳೆ ಸಮಾವೇಶದ ಉದ್ದೇಶವನ್ನು ವಿವರಿಸುತ್ತಾ ರಾಜಲ ಬಂಡಾ ಡೈವರ್ಶನ್ ಕಾಲುವೆಯ ಕುರಿತು ಒತ್ತಾಯಿಸಲು ಹೋರಾಟಕ್ಕೆ ಕರೆ ಕೊಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿ. ಅಮರೇಗೌಡ ಅವರು ಮಾತನಾಡುತ್ತಾ, ನೀರಾವರಿ ಪ್ರದೇಶದ ರೈತರ ಸಮಸ್ಯೆಗಳನ್ನು ವಿವರಿಸಿದರು ಸಿದ್ದಯ್ಯ ಸ್ವಾಮಿ, ದೇವಣ್ಣ ಇವರುಗಳು ಮಾತನಾಡಿ ಸಂಘಟಿತ ಹೋರಾಟಕ್ಕೆ ಮನವಿ ಮಾಡಿದರು. ಕೊನೆಯಲ್ಲಿ ಮಲ್ಲಿಕಾರ್ಜುನ ಅವರು ವಂದಿಸಿದರು.

ಗ್ರಾಮಕ್ಕೆ ಇಬ್ಬಿಬ್ಬರಂತೆ ಪ್ರತಿನಿಧಿಗಳನ್ನೊಳಗೊಂಡ ಹೋರಾಟ ಸಮಿತಿಯನ್ನು ರಚಿಸಲಾಯಿತು.

ಜಿಲ್ಲಾ ಸಮಿತಿಯ ಸಭೆ

ಜಿಲ್ಲೆಯಾದ್ಯಂತ ಚಳುವಳಿಯನ್ನು ವಿಸ್ತರಿಸಲು ಪೂರಕವಾಗಿ ಕಾರ್ಯಕ್ರಮ ರೂಪಿಸಲು 26-10-82 ರಂದು ರೈತ ಸಂಘದ ಜಿಲ್ಲಾ ಸಮಿತಿಯ ವಿಸ್ತೃತ ಸಭೆ ನಡೆಸಲಾಯಿತು.

ಸಭೆಯಲ್ಲಿ ರಾಯಚೂರು, ಸಿಂದನೂರು, ಗಂಗಾವತಿ, ಕುಷ್ಟಗಿ, ಯಲಬರ್ಗಾ ಪ್ರತಿನಿಧಿಗಳು ಹಾಜರಿದ್ದು, ಆಯ ತಾಲ್ಲೂಕಾವಾರು ವರದಿಯನ್ನು ಸಲ್ಲಿಸಿದರು.

ಜಿಲ್ಲೆಯಾದ್ಯಂತ ಬರಗಾಲವಿರುವುದರಿಂದ ಸಣ್ಣ ರೈತರು, ಕೃಷಿ ಕಾರ್ಮಿಕರು ತೀವ್ರಸಂಕಷ್ಟಕ್ಕೊಳಗಾಗಿರುವರು. ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಒತ್ತಾಯಿಸುತ್ತಾ ಬಂದಿದ್ದರೂ ಸರಕಾರ ಕ್ರಮವಹಿಸಲಿಲ್ಲ. ನವೆಂಬರ್ ಕೊನೆಯಲ್ಲಿ ಜಿಲ್ಲೆಯಾದ್ಯಂತ "ರೋಡ್ ರೋಕೋ" "ಜೈಲ್ ಭರೋ" ಚಳುವಳಿರೂಪಿಸಲು ತೀರ್ಮಾನಿಸಲಾಯಿತು. ಡಿಸೆಂಬರ್‌ನಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನಕ್ಕೆ 10,000 ರೂ. ನಿಧಿ ಸಂಗ್ರಹಿಸಬೇಕೆಂದು ತೀರ್ಮಾನಿಸಲಾಯಿತು.

ದೇವದುರ್ಗ : ಲಮಾಣಿ ಜನಾಂಗದ ಸಮಾವೇಶ

ದೇವದುರ್ಗ ತಾಲ್ಲೂಕಿನ ಮರಿಗೆಮ್ಮನ ದಿಬ್ಬಿ ತಾಂಡಾದಲ್ಲಿ ರೈತ ಸಂಘದ ಆಶ್ರಯದಲ್ಲಿ 30-10-82 ರಂದು ಸಭೆ ನಡೆಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ|| ಚಂದ್ರಶೇಖರ ಬಾಳೆಯವರು ಗುಡ್ಡಗಾಡು ಜನಾಂಗದ ಅಭ್ಯುದಯಕ್ಕೆ ಕಾಂಗ್ರೆಸ್ ಸರಕಾರ ಕಿಂಚಿತ್ತೂ ಕಾಳಜಿ ವಹಿಸಿಲ್ಲ ಎಂದರು.

ಡಿಸೆಂಬರ್ 9 ರಂದು ತಾಲ್ಲೂಕಾ ಮಟ್ಟದಲ್ಲಿ ಲಮಾಣಿ ಜನಾಂಗದ ಸಮಾವೇಶ ನಡೆಸಲು ತೀರ್ಮಾನಿಸಿ ಐದು ಜನರ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಕುಷ್ಟಗಿ : ರೈತರ ಪ್ರತಿಭಟನಾ ಮೆರವಣಿಗೆ

ಮಳೆ ಇಲ್ಲದೆ ಭೂಮಿ ಬರಡಾಗಿರುವ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಒತ್ತಾಯಿಸಿ 13-10-82 ರಿಂದ 25-10-82 ರವರೆಗೆ 13 ದಿನಗಳ ಕಾಲ ಕುಷ್ಟಗಿಯಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. 25 ರಂದು ಪಂಜಿನ ಮೆರವಣಿಗೆ ಹೊರಡಿಸಲಾಗಿತ್ತು.

ಉಡುಪಿ : ಪ್ರೆಸ್ ಕಾರ್ಮಿಕರ ಸಮಾವೇಶ

"ಸಂಘಟನೆಯಿಂದ ಮಾತ್ರ ಕಾರ್ಮಿಕರು ಯಾವುದೇ ಸವಲತ್ತುಗಳನ್ನು ಪಡೆಯಲು ಸಾಧ್ಯ. ಕಾರ್ಮಿಕರೆಲ್ಲ ಸಂಘಟಿತರಾಗಿ ಹೋರಾಡಿದರೆ ಮಾತ್ರ ಕಾರ್ಮಿಕರಿಗೆ ಸಂಬಂಧಿಸಿದ ಕಾನೂನು ಕಾಯಿದೆಗಳು ಜಾರಿಯಾಗುತ್ತವೆ" ಎಂದು ಕಾಂ|| ಯು. ಪಿ. ಡಿಸೋಜ (ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.)ನ ಉಪಾಧ್ಯಕ್ಷ)ಅವರು ನುಡಿದರು. ನವೆಂಬರ್ 7 ರಂದು ಉಡುಪಿಯಲ್ಲಿ ನಡೆದ ಪ್ರೆಸ್ ಕಾರ್ಮಿಕರ ಸಮಾವೇಶನವನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಆರಂಭದಲ್ಲಿ ಸಂಘಟನಾ ಸಮಿತಿಯ ಸಂಚಾಲಕರು ಸ್ವಾಗತಿಸಿದರು. ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್‌ನ ಉಪಾಧ್ಯಕ್ಷ ಕಾಂ|| ಬಿ. ಉಮಾನಾಥ, ಅತಿಥಿಯಾಗಿ ಆಗಮಿಸಿದ್ದ ಜೀವ ವಿಮಾ ನೌಕರರ ಸಂಘದ ಕಾರ್ಯದರ್ಶಿ ಕಾಂ|| ವಿಶ್ವನಾಥ ರೈ ಅವರುಗಳು ಮಾತನಾಡಿ ಪ್ರೆಸ್ ಕಾರ್ಮಿಕರ ಹೋರಾಟಕ್ಕೆ ತಮ್ಮ ಸಂಘಗಳ ಬೆಂಬಲ ಸೂಚಿಸಿದರು.

ಉಡುಪಿಯ ಎಲ್ಲಾ ಪ್ರೆಸ್ಸುಗಳಲ್ಲಿ ಪಿ.ಎಫ್., ಇ.ಎಸ್.ಐ. ಸೌಲಭ್ಯಗಳನ್ನು ಜಾರಿಗೊಳಿಸಬೇಕು ; ಎಲ್ಲಾ ಕಾರ್ಮಿಕರಿಗೆ ಸಮವಸ್ತ್ರಗಳನ್ನು ಪೂರೈಸಬೇಕು ಎಂದು ಒತ್ತಾಯಿಸುವ ಠರಾವುಗಳನ್ನು ಅಂಗೀಕರಿಸಲಾಯಿತು.

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್‌ನ ಕಾರ್ಯದರ್ಶಿ ಕಾಂ|| ಭುಜಂಗ ಮಾರ್ಲ, ಜೊತೆ ಕಾರ್ಯದರ್ಶಿ ಕಾಂ|| ವಸಂತ, ಕೋಶಾಧಿಕಾರಿ ಶೀನಪ್ಪ ಅಂಚನ ಮೊದಲಾದವರು ಉಪಸ್ಥಿತರಿದ್ದರು.

ಒಬ್ಬ ಸಂಚಾಲಕ, ಇಬ್ಬರು ಜೊತೆ ಸಂಚಾಲಕರು, ಒಬ್ಬರು ಸಲಹೆಗಾರರು ಇರುವ 22 ಜನ ಸದಸ್ಯರುಳ್ಳ ಉಡುಪಿ ಡಿವಿಜನ್ ಪ್ರೆಸ್ ಕಾರ್ಮಿಕರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

●

ಮೆರವಣಿಗೆಯ ನಂತರ ನಡೆದ ಸಭೆಯನ್ನುದ್ದೇಶಿಸಿ ವಿರೂಪಾಕ್ಷ ಹಿರೇಮಠ ಮತ್ತು ಬಸವರಾಜ ಕಂಬಳಿ ಇವರು ಮಾತನಾಡಿ ಬೇಡಿಕೆಯ ಕುರಿತು ನಿರ್ಲಕ್ಷಮಾಡಿದರೆ ಚಳುವಳಿಯನ್ನು ಉಗ್ರಗೊಳಿಸಬೇಕಾದೀತೆಂದು ಎಚ್ಚರಿಸಿದರು.

ಕಾರ್ಯಕ್ರಮವು ರೈತ ಸಂಘ ಮತ್ತು ದ. ಸಂ. ಸ. ಜಂಟೀ ನೇತೃತ್ವದಲ್ಲಿ ನಡೆಯಿತು.

○

ನನ್ನ ಭೂಗತದ ದಿನಗಳು

(2ನೇ ಪುಟದಿಂದ)

ಹಾವು ನನ್ನ ಬಾಯಿ ಮೇಲೆ ಹರಿದಂತೆ ಭಾಸವಾಯಿತು. ನಾನು ಭೀತನಾಗಿ ಜಡವಾಗಿಬಿಟ್ಟಿದ್ದೆ.

ಹಾವು ನಿಧಾನವಾಗಿ ಯಾವುದೋ ಒಂದು ಮರದ ತುಂಡಿನ ಮೇಲೆ ಹರಿದು ಹೋದಂತೆ ನನ್ನ ಕಾಲ ಮೇಲೆ ಹರಿದು ಹೋಯಿತು. ಅದರ ದಾರಿಯಲ್ಲಿ ನನ್ನ ಕಾಲನ್ನಿಟ್ಟು ಅಕ್ರಮ ಪ್ರವೇಶ ಮಾಡಿದ ಅನುಭವ ನನಗಾಯಿತು. ಅಂತೂ, ಆ ರಾತ್ರಿ ನಾನು ಮತ್ತೆ ನಿದ್ರೆ ಹೋಗಲು ಆಗಲೇ ಇಲ್ಲ.

ರಾತ್ರಿಯ ನೀರವತೆಯ ಶಬ್ದ, ಆಹಾರವನ್ನು ಹುಡುಕಿ ಹೊರಟ ಪ್ರಾಣಿಗಳ ಹೆಜ್ಜೆಯ ಸಪ್ಪಳ, ಪಕ್ಷಿಗಳ ಚಿಲಿಪಿಲಿ ಕೂಗುಗಳಿಂದ ಕಾಡು ತುಂಬಿ ಹೋಗಿತ್ತು. ನನಗೆ ಇದೊಂದು ಅಪರಿಚಿತ ಅನುಭವವಾಗಿತ್ತು. ಆ ರಾತ್ರಿ ಒಂದು ಸಣ್ಣ ಸಪ್ಪಳವೂ ನನ್ನನ್ನು ನಡುಗಿಸಿತು. ಸಾಧಾರಣವಾಗಿ ನಾನು ನಿಶ್ಚಿಂತನಾಗಿ ಚೆನ್ನಾಗಿ ನಿದ್ರಿಸುವವನು. ಬೇಕೆಂದಾಗ ನಿದ್ರಿಸುವ, ಬೇಕೆಂದಾಗ ಎಚ್ಚರವಾಗುವ ಮನೋಬಲ ನನಗಿದೆ. ಆದರೆ ಆ ರಾತ್ರಿ ಮಾತ್ರ ನಾನು ನಿದ್ರಿಸಲು ಸಾಧ್ಯವಾಗಲೇ ಇಲ್ಲ.

(ಮುಂದುವರೆಯುವುದು)

○

ಬೆಂಗಳೂರು : ಪ್ರತಿಭಟನಾ ಮೆರವಣಿಗೆ

ಹಡಿತರ ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಿರುವುದನ್ನು ಕೈ ಬಿಡಬೇಕೆಂದೂ, ಅಗತ್ಯ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸಬೇಕೆಂದೂ ಮತ್ತು ನಾಗರೀಕರಿಗೆ ರಸ್ತೆ, ಒಳಚರಂಡಿ, ಬೀದಿ ದೀಪ, ಆಸ್ಪತ್ರೆ ಇತ್ಯಾದಿ ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸಬೇಕೆಂದು ಒತ್ತಾಯಿಸಿ, ಸಿ. ಪಿ. ಐ. (ಎಂ.) ವಿಮಾನಪುರ (ಎಚ್.ಎ.ಎಲ್.) ಸ್ಥಳೀಯ ಸಮಿತಿಯ ಆಶ್ರಯದಲ್ಲಿ 30-10-82 ರಂದು ಮೆರವಣಿಗೆ ನಡೆಯಿತು.

ಬೆಳಿಗ್ಗೆ, ಮಾರತಹಳ್ಳಿ ಮತ್ತು ತಿಪ್ಪಸಂದ್ರ ಈ ಎರಡು ಸ್ಥಳಗಳಿಂದ ಏಕಕಾಲಕ್ಕೆ ಹೊರಟ ಮೆರವಣಿಗೆ ಎಚ್. ಎ. ಎಲ್. ಕಾಲೋನಿ, ರಮೇಶ್‌ನಗರ, ವಿಭೂತಿಪುರ, ಮುರುಗೇಶ್‌ಪಾಳ್ಯ ಈ ಮಾರ್ಗವಾಗಿ ಬಂದು ವಿಮಾನಪುರ ಕೋಆಪರೇಟಿವ್ ಸೊಸೈಟಿಯ ಹತ್ತಿರ ಕಲೆತು ಎಚ್. ಎ. ಎಲ್. ಸ್ಯಾನಿಟರಿ ಬೋರ್ಡಿನ ಮುಖ್ಯಾಧಿಕಾರಿಗೆ 13 ಬೇಡಿಕೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಸಿತು. ಹಾಗೂ ನಕಲನ್ನು ಜಿಲ್ಲಾಧಿಕಾರಿಗೆ ಕಳಿಸಲಾಯಿತು.

ನಿಯೋಗದೊಂದಿಗೆ ಮಾತುಕತೆ ನಡೆಸಿದ ಅಧಿಕಾರಿಯವರು ಬೇಡಿಕೆಗಳನ್ನು ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದು ಸೂಕ್ತ ಪರಿಹಾರ ಒದಗಿಸಲು ಆಗ್ರಹಪಡಿಸುವುದಾಗಿ ಭರವಸೆ ನೀಡಿದರು.

○

ಮೈಕೋ ಕಾರ್ಮಿಕರ ಸಂಘದ ಆಶ್ರಯದಲ್ಲಿ

ಕಾಂ। ಸೂರಿಯವರಿಗೆ ಆತ್ಮೀಯ ಸನ್ಮಾನ

ನವೆಂಬರ್ 8 ರಂದು ಕಿಕ್ಕಿರಿದು ತುಂಬಿದ್ದ ಬೆಂಗಳೂರಿನ ಪುರಭವನದಲ್ಲಿ ಕಾರ್ಮಿಕ ನಾಯಕ, ಧೀರ ಹೋರಾಟಗಾರ ಕಾಮ್ರೇಡ್ ಸೂರ್ಯನಾರಾಯಣ ರಾವ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಮೈಕೋ ಕಾರ್ಮಿಕ ಸಂಘದ ಕಾಂ। ನಾರಾಯಣ ರಾವ್, ಫಿಲಿಪ್ ನರೋನಾ, ವೀರಾಸ್ವಾಮಿ, ಆಲ್ಬರ್ಟ್ ಸುದರ್ಶನರನ್ನೊಳಗೊಂಡ 'ಸೂರ್ಯನಾರಾಯಣರಾವ್ ಸನ್ಮಾನ ಸಮಿತಿಯು ಈ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿತ್ತು.



ವೇದಿಕೆಯ ದೃಶ್ಯ. ಎಡದಿಂದ ಶ್ರೀ ರಘುಪತಿ, ಕೃಷ್ಣ ಅಯ್ಯರ್, ಕಾಂ। ಸೂರಿ, ಮೈಕಲ್, ಚಂದ್ರಶೇಖರ್, ಕಾಂ। ವಿ. ಜೆ. ಕೆ. ನಾಯರ್ ಮತ್ತು ಶ್ರೀ ಕೇಶವಮೂರ್ತಿ.



ಸನ್ಮಾನಕ್ಕೆ ಕಾಂ। ಸೂರಿಯವರು ಉತ್ತರಿಸುತ್ತಿರುವ ದೃಶ್ಯ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಉಪಸಭಾಪತಿ ಶ್ರೀ ವಿ. ಎಸ್. ಕೃಷ್ಣಅಯ್ಯರ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕ್ರಾಂತಿರಂಗದ ಶ್ರೀ ಎಂ. ರಘುಪತಿ, ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ. ಚಂದ್ರಶೇಖರ್, ಶಾಸಕ ಹಾಗೂ ಎಚ್. ಎಂ. ಎಸ್. ಮುಖಂಡ ಕಾಂ। ಮೈಕಲ್ ಫರ್ನಾಂಡಿಸ್, ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ। ವಿ ಜೆ.ಕೆ. ನಾಯರ್ ಸರಕಾರಿ ನೌಕರರ ಸಂಘದ ಶ್ರೀ ಕೇಶವಮೂರ್ತಿ, ಜೀವ ವಿಮಾ ನೌಕರರ ಕಾಂ। ಕೆ. ವಿ. ಶ್ರೀನಿವಾಸ್, ವಕೀಲ ಗೋಪಾಲಗೌಡ, ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಶ್ರೀ ಎಸ್. ಅರ್ಜುನದೇವ ಮುಂತಾದವರು ಮಾತನಾಡಿ ಕಾಂ। ಸೂರಿಯವರ ಹೋರಾಟ ಜೀವನದ ನಾನಾ ಮುಖಗಳನ್ನು ಪರಿಚಯಿಸಿದರು. ಸೂರಿಯವರಿಗೆ ಮಾಡಿದ ಸನ್ಮಾನ ಇಡೀ ಕಾರ್ಮಿಕ ವರ್ಗಕ್ಕೆ ಸಂದ ಸನ್ಮಾನ ಎಂದವರುಗಳು ಅಭಿಪ್ರಾಯಪಟ್ಟರು.


ಮೈಕೋ ಕಾರ್ಮಿಕ ಸಂಘದ ಪರವಾಗಿ ನಾರಾಯಣರಾವ್, ವೀರಾಸ್ವಾಮಿ, ಫಿಲಿಪ್ ನರೋನಾ ಅವರುಗಳು ಮಾತನಾಡಿ ಮೈಕೋ ಕಾರ್ಮಿಕರ ಧೀರ ಹೋರಾಟದ ಸಮಯದಲ್ಲಿ ಕಾಂ। ಸೂರಿ ಸೂಕ್ತ ಮಾರ್ಗದರ್ಶನ ನೀಡಿದ್ದನ್ನು ಸ್ಮರಿಸಿದರು. "ಈ ಸನ್ಮಾನ ಸಮಾರಂಭ. ಮೈಕೋ ಕಾರ್ಮಿಕರ ನಿಜವಾದ ಧುರೀಣ ಯಾರೆಂಬುದು ನಿಚ್ಚಳವಾಗಿ ಸಾಬೀತಾದಂತಾಗಿದೆ" ಎಂದರು. ಕಾಂ। ಸೂರಿಯವರು ಇನ್ನೂ ಧೀರ್ಘಕಾಲ ಕಾರ್ಮಿಕವರ್ಗಕ್ಕೆ ಮಾರ್ಗದರ್ಶನ ನೀಡಲಿ ಎಂದು ಹಾರೈಸಿದ ಅವರುಗಳು ಸಂಘದ ಪರವಾಗಿ ಸನ್ಮಾನ ಪತ್ರವನ್ನು ಅರ್ಪಿಸಿದರು.

ಮೈಕೋ ಕಾರ್ಮಿಕ ಸಂಘದ ಅಧ್ಯಕ್ಷ ಹಾಗೂ ಸಿ. ಐ. ಟಿ. ಯು. ರಾಜ್ಯ ಸಮಿತಿಯ ಅಧ್ಯಕ್ಷರು ಆಗಿರುವ ಕಾಂ। ಸೂರ್ಯನಾರಾಯಣರಾವ್ ಅವರು ಸನ್ಮಾನಕ್ಕೆ ಉತ್ತರಿಸುತ್ತ ಕೃತಜ್ಞತೆ ವ್ಯಕ್ತಪಡಿಸಿದರು. ಅವರು ಮುಂದುವರೆದು ಮೈಕೋ ಸಂಘದ ಕೆಲಸಕಾರ್ಯಗಳಲ್ಲಿ ಎಫ್. ಎಂ. ಖಾನ್ ಅಡೆತಡೆ ಕೊಡುತ್ತ ಬಂದಿರುವುದನ್ನು ವಿವರಿಸಿದ ಸೂರಿ, ಹೋರಾಟದ ಮೂಲಕ ಕಾರ್ಮಿಕರ ಐಕ್ಯತೆಯನ್ನು ಕಾಯ್ದುಕೊಂಡಿರುವುದನ್ನು ತಿಳಿಸಿದರು. ತಮಗೆ ಮಾಡಿದ ಈ ಸನ್ಮಾನ ವ್ಯಕ್ತಿಗತವಾದುದಲ್ಲ; ಬದಲು ವ್ಯವಸ್ಥೆ ಬದಲಾವಣೆಯ ಧ್ಯೇಯವಿಟ್ಟುಕೊಂಡ ಸಿ. ಐ. ಟಿ. ಯು. ವಿಗೆ ಮಾಡಿದ ಸನ್ಮಾನ ಎಂದರು.

ಪುರಭವನದಲ್ಲಿ ಕಿಕ್ಕಿರಿದು ತುಂಬಿದ್ದ ಕಾರ್ಮಿಕರು ತಮ್ಮ ನೆಚ್ಚಿನ ನಾಯಕನಿಗೆ ಪುಷ್ಪಹಾರ, ಗಂಧದಹಾರ, ನೋಟಿನ ಹಾರಗಳನ್ನು ಅರ್ಪಿಸಿ ತಮ್ಮ ವಾತ್ಸಲ್ಯ ತೋರ್ಪಡಿಸಿದರು. ಕಾಂ। ಸೂರಿಯವರಿಗೆ ರೂ. 24,110 ಗಳನ್ನು ಸಲ್ಲಿಸಲಾಯಿತು. ಕಾಂ। ಸೂರಿಯವರು ತಮಗೆ ಕೊಟ್ಟ ಹಣದಲ್ಲಿ ರೂ. 15000 ಗಳನ್ನು ಮೈಕೋ ಸಂಘಕ್ಕೂ, ರೂ. 8000 ಗಳನ್ನು ಸಿ ಐ. ಟಿ. ಯು. ಗೆ ಸಲ್ಲಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕಾಂ। ಸೂರಿಯವರನ್ನು ಮೆರವಣಿಗೆ ಮೂಲಕ ಪುರಭವನಕ್ಕೆ ಕರೆತರಲಾಯಿತು.

○



ನೆಚ್ಚಿನ ನಾಯಕನ ಸನ್ಮಾನ ಸಮಾರಂಭದಲ್ಲಿ ಕಿಕ್ಕಿರಿದು ತುಂಬಿದ ಪುರಭವನ.

"ಗೋವಾ ಗೋವನ್ನರಿಗೆ ಮಾತ್ರ"

(1ನೇ ಪುಟದಿಂದ)

ಉಲ್ಲಂಘಿಸಿದಂತಾಗಿದೆ. ಅಸ್ಸಾಂ, ಪಂಜಾಬ್ ಮತ್ತಿತರ ಕಡೆ ಕಂಡು ಬರುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ಪಾತ್ರವೇ ಈ ಗಲಭೆಗಳ ಹಿಂದಿರುವುದು ನಿಸ್ಸಂಶಯ. ನಮ್ಮ ದೇಶದ ಐಕ್ಯತೆ, ಸಮಗ್ರತೆಗೆ ಈ ವಿಚ್ಛಿದ್ರಕಾರಿ ಶಕ್ತಿಗಳು ಗಂಡಾಂತರಕಾರಿಯಾಗಿವೆ. ಭಾಷೆ, ಪ್ರದೇಶಗಳ ಹೆಸರಿನಲ್ಲಿ ಈ ಶಕ್ತಿಗಳು ನಡೆಸುತ್ತಿರುವ ಕುತಂತ್ರದ ವಿರುದ್ಧ ಎಲ್ಲರೂ ಎಚ್ಚರವಾಗಿರಬೇಕಾದದ್ದು ಅತ್ಯಗತ್ಯ ಎಂಬುದನ್ನು ಗೋವಾದ ಘಟನೆಗಳು ಒತ್ತಿ ಹೇಳುತ್ತವೆ.

ದುಡಿಯುವ ಜನತೆಯ ಐಕ್ಯತೆಯನ್ನು ಒಡೆದು ಹಾಕುವ ಈ ಘಟನೆಗಳ ಪ್ರಯೋಜನ ದೊರೆಯುವುದು ಶೋಷಕ ವರ್ಗಕ್ಕೇ ಎಂಬುದನ್ನು ಮರೆಯುವಂತಿಲ್ಲ.

ನಿರಾಶ್ರಿತರಾಗಿ ಆಗಮಿಸಿರುವ ಬಡಪಾಯಿಗಳ ನೆರವಿಗೆ ನಿಲ್ಲುವುದು ಕರ್ನಾಟಕ ಪ್ರಜೆಗಳ ಕರ್ತವ್ಯ. ಈ ಸಹಸ್ರಾರು ಕೂಲಿಗಳು ಮತ್ತೆ ಗೋವಾಕ್ಕೆ ತೆರಳಿ ಯಾವುದೇ ಆತಂಕ, ಭೀತಿ ಇಲ್ಲದೇ ಬದುಕಲು ಗೋವಾದ ಸರಕಾರ ಯತ್ನಿಸಬೇಕು. ಕರ್ನಾಟಕ ಸರಕಾರ ಈ ದಿಶೆಯಲ್ಲಿ ಗೋವಾದ ಮುಖ್ಯಮಂತ್ರಿ ಪ್ರತಾಪ್ ಸಿಂಗ್ ರಾಣೆಯವರನ್ನು ಒತ್ತಾಯಿಸುವದಗತ್ಯ.

ಗೋವಾದ ಈ ಅಮಾನುಷ ಘಟನೆಗಳನ್ನು ತೀವ್ರವಾಗಿ ಖಂಡಿಸುತ್ತಿರುವ ಈ ಸಂದರ್ಭದಲ್ಲಿ, ಇದನ್ನು ನೆಪಮಾಡಿಕೊಂಡು ನಮ್ಮ ರಾಜ್ಯದ ಭಾಷಾ ಅಂದಾಭಿಮಾನಿಗಳು ಸ್ವೇಚ್ಛೆಯಿಂದ ವರ್ತಿಸುವಲ್ಲಿ ಅನುವು ಮಾಡಿಕೊಡಬಾರದಾಗಿ ರಾಜ್ಯದ ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಿ. ಪಿ. ಐ. (ಎಂ) ಮನವಿ ಮಾಡುತ್ತದೆ.

ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯ ಕಾಂ। ವಿ. ಜೆ. ಕೆ. ನಾಯರ್ ಈ ಘಟನೆಗಳ ಕುರಿತು ಹೇಳಿಕೆಯೊಂದನ್ನು ಹೊರಡಿಸಿ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಎಸ್. ಎಫ್. ಐ. ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯಕರ್ತರು ಗೋವಾದಲ್ಲಿ ಕನ್ನಡಿಗರು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಿ ನಿಷೇದಾಜ್ಞೆಯನ್ನು ಉಲ್ಲಂಘಿಸಿ ಬಂಧನಕ್ಕೊಳಗಾದರು. ಬಂಧಿತರಲ್ಲಿ ಕಾಂ। ಆರಾಧ್ಯ, ರಾಜಣ್ಣ ಮತ್ತಿತರರು ಸೇರಿದ್ದಾರೆ.

●

ಕಾಂ। ಲಿಯೊನಿಡ್ ಬ್ರೆಜ್ನೇವ್ ನಿಧನ

(1ನೇ ಪುಟದಿಂದ)

ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. 1977 ರಿಂದ ಸೋವಿಯಟ್ ಒಕ್ಕೂಟದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ನೀಡಿದ ಅಮೋಘ ಸೇವೆಗಾಗಿ ಸೋವಿಯತ್ ನಾಡಿನ ಅತ್ಯುನ್ನತ ಪದವಿಗಳನ್ನು ನೀಡಿ ಗೌರವಿಸಲಾಗಿತ್ತು. ಇತ್ತೀಚೆಗೆ ತಾನೆ ಅವರಿಗೆ ಅಂತರರಾಷ್ಟ್ರೀಯ ಲೆನಿನ್ ಶಾಂತಿ ಪ್ರಶಸ್ತಿಯನ್ನು ನೀಡಲಾಗಿತ್ತು.

ರಾಷ್ಟ್ರಪತಿ ಜೇಲ್ ಸಿಂಹ, ಪ್ರಧಾನಿ ಇಂದಿರಾ ಮೊದಲಾದವರೆಲ್ಲ ಸಂತಾಪ ಸಂದೇಶ ಕಳುಹಿಸಿ ಮಿತ್ರನೊಬ್ಬನನ್ನು ಕಳೆದುಕೊಂಡಂತಾಗಿದೆ ಎಂದು ದುಃಖಿಸಿದ್ದಾರೆ. ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯು ಕಾಂ। ಬ್ರೆಜ್ನೇವ್‌ರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿ ವಿಶ್ವ ಶಾಂತಿ ಚಳುವಳಿಗೆ ಇದೊಂದು ದೊಡ್ಡ ಪೆಟ್ಟು ಎಂದಿದೆ. ಸಿ. ಪಿ. ಐ. [ಎಂ] ರಾಜ್ಯ ಸಮಿತಿಯ ಪರವಾಗಿ ಕಾಂ। ಎಸ್. ಸೂರ್ಯನಾರಾಯಣರಾವ್ ಅವರು ಹೇಳಿಕೆಯೊಂದನ್ನು ಹೊರಡಿಸಿ, ಕಾಂ। ಬ್ರೆಜ್ನೇವ್‌ರ ನಿಧನದಿಂದ ಜಗತ್ತಿನ ಶಾಂತಿ ಪ್ರಿಯರಿಗೆಲ್ಲಾ ಆಘಾತವಾಗಿದೆ ಎಂದಿದ್ದಾರೆ.

●

ಬಂಟ್ವಾಳ :

ಕೂಲಿ ಹೆಚ್ಚಳ

ಬಂಟ್ವಾಳದ ತಲೆಹೊರೆ (ಲೋಡ್ ಅನ್ ಲೋಡ್) ಕೆಲಸಗಾರರು ಕೂಲಿ ಹೆಚ್ಚಳದ ಬೇಡಿಕೆಯನ್ನು ಮುಂದಿಟ್ಟು ಹೋರಾಟ ನಡೆಸಿದ್ದರು.

ಈ ಬೇಡಿಕೆಗಳ ಕುರಿತು ಸಗಟು ವರ್ತಕರು ಯೂನಿಯನ್ ಮುಖಂಡರೊಡನೆ ಮಾತುಕತೆ ನಡೆಸಿ ಕೂಲಿ ಹೆಚ್ಚಿಸುವುದಕ್ಕೆ ಒಪ್ಪಿಕೊಂಡು 2-11-82 ರಿಂದ ಜಾರಿಗೆ ತಂದಿದ್ದಾರೆ. ಈ ಕೆಲಸಗಾರರು ಬಂಟ್ವಾಳ ತಾಲೂಕು ಜನರಲ್ ವರ್ಕರ್ಸ್ ಯೂನಿಯನ್ನಿನ ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ.

ಐಕ್ಯರಂಗ ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.